ದುಡಿವ ಜನರ ಪ್ರಾಣ ಮಿತ್ರ

ಅಂಗನವಾಡಿ ನೌಕರರ 5ನೇ ಅಖಿಲ ಭಾರತ ಸಮ್ಮೇಳನದ ವಿಶೇಷ ಸಂಚಿಕೆ


ಅಂಗನವಾಡಿ ನೌಕರರ

ಛಲ ಬಿಡದ ಹೋರಾಟ ಫಲ ಪಡೆಯುವುದರತ್ತ

ಈಗ ಕರ್ನಾಟಕದ ತುಂಬೆಲ್ಲಾ ಒಂದಲ್ಲಾ ಒಂದು ರಾಜಕೀಯ ಪಕ್ಷಗಳ ಸಮಾವೇಶಗಳು... ಸಮ್ಮೇಳನಗಳ ಭರಾಟೆ. ಅಧಿಕಾರ ಕೇಂದ್ರಿತ ರಾಜಕಾರಣ, ಜಾತಿ ಮೇಲಾಟಗಳು, ವ್ಯಕ್ತಿಗಳ ವೈಭವೀಕರಣಗಳೇ ಈ ಸಮಾವೇಶ-ಸಮ್ಮೇಳನಗಳ ಹಿನ್ನೆಲೆ. ಬಹುತೇಕ ಅದೇ ಈ ಚಟುವಟಿಕೆಗಳ ಹಿಂದಿನ ಬಹುಮುಖ್ಯ ಕಾರಣ ಮತ್ತು ಹೂರಣ. ಆದರೆ ಇತ್ತೀಚೆಗೆ ಬೆಂಗಳೂರು ನಗರದಲ್ಲಿ ಜರುಗಿದ ಅಂಗನವಾಡಿ ನೌಕರರ 5ನೇ ಅಖಿಲ ಭಾರತ ಸಮ್ಮೇಳನ - ಸಮ್ಮೇಳನದ ಹಿನ್ನೆಲೆಯಲ್ಲಿ ನಡೆದ ಅಂಗನವಾಡಿ ಕಾಯಕರ್ತೆಯರ, ಸಹಾಯಕಿಯರ ಬೃಹತ್ ರ್‍ಯಾಲಿಯು ಈ ಪ್ರವೃತ್ತಿಗಳಿಂದ ಭಿನ್ನವಾದ ಪ್ರಾಮಾಣಿಕ ಕಾಳಜಿಯ ಚಳುವಳಿ ಎಂಬುದನ್ನು ತಮ್ಮ ಲೇಖನದಲ್ಲಿ ಗುರುತಿಸಿದ್ದಾರೆ ಪತ್ರಕರ್ತೆ

◆ ರೇಣುಕಾ ಮಂಜುನಾಥ್

ಇತ್ತೀಚೆಗೆ ನಡೆದ ಮಹಿಳಾ ಸಮಾವೇಶವೊಂದು ಮಹಿಳೆಯರಿಗೆ ಹೆಮ್ಮೆ ತಂದಿದೆಯೆಂದೇ ಹೇಳಬಹುದು. ಅದು ನವೆಂಬರ್ 8ರಿಂದ 11ರವರೆಗೆ ಬೆಂಗಳೂರಿನಲ್ಲಿ ನಡೆದ ಅಖಿಲಭಾರತ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಒಕ್ಕೂಟದ ಐದನೇ ಮಹಾ ಸಮ್ಮೇಳನ. ಅಲ್ಲಿ ಸೇರಿದ್ದ ಪ್ರತಿ ಮಹಿಳೆಯರಲ್ಲಿ ಒಂದು ಉದ್ದೇಶವಿತ್ತು. ಮೂರು ದಶಕಗಳಿಂದ ದೇಶದ ಸಾಮಾಜಿಕ ಸುಧಾರಣೆಯ ಮೂಲಭೂತ ಕಾರ್ಯಭಾರಿಯಾಗಿ ನಿರಂತರ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಅಂಗನೆಯರ ವಿಷಯದಲ್ಲಿ ಸರ್ಕಾರ ಎಂದೂ ನ್ಯಾಯಪರ ನಿಲುವು ತಳೆದಿಲ್ಲ. ಅವರಿಗೆ ಗೌರವಧನವಿತ್ತು ಜೀತದಾಳುಗಳಂತೆ ಅವರನ್ನೂ ದುಡಿಸಿಕೊಂಡ ಸರ್ಕಾರ ಅವರ ಭವಿಷ್ಯದ ಬದುಕಿಗೊಂದು ನೀತಿ ನಿಯಮ ರೂಪಿಸಿಲ್ಲ. ರಾಜ್ಯಮಟ್ಟದ, ರಾಷ್ಟ್ರಮಟ್ಟದ ಎಲ್ಲ ನೂತನ ಯೋಜನೆಗಳ ಬಗೆಗೆ ಮೊದಲ ಅರಿವು ಮೂಡುವುದೇ ಅವಳಿಗೆ. ಏಕೆಂದರೆ ಪ್ರತಿ ಯೋಜನೆಯ ಅನುಷ್ಠಾನಕ್ಕೆ ಹೆಗಲು ಕೊಡುವವಳೇ ಅವಳು.



ಬಹಿರಂಗ ಸಭೆಯ ವೇದಿಕೆ

ಶೋಷಣೆಗೂ ಮಿತಿ ಇಲ್ಲವೇ?

ಇಡೀ ವಿಶ್ವದಲ್ಲೇ ಅತ್ಯಂತ ವ್ಯಾಪಕವಾದ ಹಾಗೂ ಕಡಿಮೆ ಖರ್ಚಿನ ಮತ್ತು ಅತಿ ಹೆಚ್ಚು ಜನರನ್ನು ತಲುಪುವ ಯೋಜನೆಯೆಂದರೆ 'ಸಮಗ್ರ ಶಿಶು ಅಭಿವೃದ್ಧಿ ಯೋಜನೆ'. ಇದರ ಪ್ರಾಮುಖ್ಯತೆಯ ಬಗೆಗೆ ಅರಿವಿದ್ದೂ ನ್ಯಾಯ ಒದಗಿಸಬೇಕಾದ ಸರ್ಕಾರವೇ ಈ ಯೋಜನೆಯ ಅಂಗನವಾಡಿ ಕಾರ್ಯಕರ್ತೆಯರನ್ನು ಶೋಷಿಸುತ್ತಿರುವುದೊಂದು ವಿಪರ್ಯಾಸ. ಅಭಿವೃದ್ಧಿಯ ನಿಟ್ಟಿನಲ್ಲಿ ಪ್ರತಿ ಅಂಗನವಾಡಿ ಕಾರ್ಯಕರ್ತೆ ದೇಶದ ಸಂಪನ್ಮೂಲ ಮಹಿಳೆಯಾಗಿ ನಿಲ್ಲಬಲ್ಲಂತಹ ಸಾಮರ್ಥ್ಯ ಹೊಂದಿದ್ದಾಳೆ. ದೇಶದ 6 ಲಕ್ಷ ಅಂಗನವಾಡಿ ಗಳಲ್ಲಿರುವ 12 ಲಕ್ಷ ಕಾರ್ಯಕರ್ತೆಯರು ಸಹಾಯಕಿಯರು ಮಾಡದ ಕೆಲಸವಿಲ್ಲ. ತಮ್ಮ ವೃತ್ತಿಯಾಧಾರಿತವಾದ ನಿತ್ಯ ಕೆಲಸಗಳೊಂದಿಗೆ ಹೆಚ್ಚುವರಿಯಾಗಿ ಒಂದಲ್ಲ ಒಂದು ಯೋಜನೆಯ ಅನುಷ್ಠಾನ ಇವರ ಹೆಗಲಿಗೆ ಬೀಳುತ್ತಲೇ ಇದೆ. 1975ರಲ್ಲಿ 23 ಯೋಜನೆಗಳೊಂದಿಗೆ ಆರಂಭವಾದದ್ದು 73 ಯೋಜನೆಗಳನ್ನು ಮುಟ್ಟಿದೆ.


ಹಾಗಾಗಿ ಜನಗಣತಿ ದನಗಣತಿ ಮೊದಲ್ಗೊಂಡು ಬಿಪಿಎಲ್ ಸರ್ವೆ, ಏಡ್ಸ್ ತಿಳುವಳಿಕೆ, ವಯಸ್ಕರ ಶಿಕ್ಷಣ, ಸಣ್ಣ ಉಳಿತಾಯ, ಆರೋಗ್ಯ ವಿಮಾ ಯೋಜನೆ, ಆನೇಕಾಲು ಔಷಧಿ ವಿತರಣೆ, ಬಾಲ್ಯವಿವಾಹ ನಿಯಂತ್ರಣ, ಜನನ ಮರಣ ದಾಖಲೆ ವನಮಹೋತ್ಸವ, ಸ್ತ್ರೀಶಕ್ತಿ ಸಂಘಟನೆ, ಬಾಲಿಕಾ ಸಮೃದ್ಧಿ ಯೋಜನೆ, ಹೆರಿಗೆ ಭತ್ಯೆ, ಹಸಿರು ಕಾರ್ಡ್ ವಿತರಣೆ ಪರಿಶೀಲನೆ ಮುಂತಾದ ಮುಗಿಯದ ಹೊರೆ ಹೇರಲಾಗುತ್ತಿದೆ. ಅದಕ್ಕಾಗಿ ಮನೆ ಮನೆ ಭೇಟಿ, ಮೇಲಾಧಿಕಾರಿಗಳಿಗೆ ವರದಿ ಒಪ್ಪಿಸುವಿಕೆ, ಸ್ಥಳೀಯ ರಾಜಕೀಯ ರಾಜಕಾರಣಗಳೊಂದಿಗೆ ಹೊಂದಾಣಿಕೆಯಲ್ಲಿ ಜಾಗರೂಕತೆ ಸಹನೆ ವಹಿಸಿ ಹೈರಾಣಾಗಿದ್ದಾಳೆ. ಇದರೊಂದಿಗೆ ತಾಯಿಯಾಗಿ, ಹೆಂಡತಿಯಾಗಿ ತನ್ನದೇ ಮನೆಯಲ್ಲಿ ಪಾತ್ರ ನಿರ್ವಹಣೆ. ಅವಳ ಇಂತಹ ಸೇವೆಗೆ ನಮ್ಮ ಘನ ಸರ್ಕಾರಗಳು ಅವಳ ನಿರಂತರ ಹೋರಾಟಕ್ಕೆ ಸ್ಪಂದಿಸಿ ನೀಡುತ್ತಿರುವ ಗೌರವಧನ ಒಂದು ಸಾವಿರ ಹಾಗೂ ಐನೂರು. ಇದನ್ನೂ ಸಹ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸೇರಿ ಹಂಚುವ ವ್ಯವಸ್ಥೆ. ಗೌರವಧನವಾಗಿ ನೀಡುವ ಈ ಹಣ ಲೆಕ್ಕಕ್ಕೇ ಸಿಗುವುದರಿಂದ ಹಸಿರು ಕಾರ್ಡ್‌ಗಳಂತಹ ಸೌಲಭ್ಯದಿಂದಲೂ ಇವಳು ವಂಚಿತಳು. ತನ್ನ ಸುತ್ತ ತನಗಿಂತ ಉತ್ತಮ ಸ್ಥಿತಿಯಲ್ಲಿರುವವರಿಗೆ ಹಸಿರು ಕಾರ್ಡ್ ನೀಡುತ್ತಾ, ಪರಿಶೀಲಿಸುವ ಇವಳು ಇದರ ಫಲಾನುಭವಿಯೂ ಆಗದೆ, ಸರ್ಕಾರಿ ನೌಕರ ಸ್ಥಾನವನ್ನು ಗಿಟ್ಟಿಸದೆ ಅತಂತ್ರ ಸ್ಥಿತಿಯಲ್ಲಿದ್ದಾಳೆ. ಈ ಸರ್ಕಾರದ ಗೌರವಧನ ಸಹ ನಿಯಮಿತವಾಗಿ ಸಿಗುವುದೆಂಬ ಭರವಸೆಯಿಲ್ಲ. ಕನಿಷ್ಟ ಸೇವಾ ಭದ್ರತೆಯೂ ಇಲ್ಲದೆ, ವಯೋಮಿತಿಯ ನಿರ್ಧಾರ 'ವಿಲ್ಲದ' ಸಾಯುವವರೆಗೂ ದುಡಿವ ಅಥವಾ ಬರಿಗೈಯಲ್ಲಿ ಮನೆ ಸೇರಬೇಕಾದ ಅತಂತ್ರ ಸ್ಥಿತಿ ಅಂಗನವಾಡಿ ಕಾರ್ಯಕರ್ತೆಯರದ್ದಾಗಿದೆ. ಇವರೆಲ್ಲ ಹಿಂದುಳಿದ ಹಾಗೂ ಸಂಕಷ್ಟದಲ್ಲಿ ಸಿಲುಕಿರುವ ಮಹಿಳೆಯರಷ್ಟೇ ಅಲ್ಲ ರೈತ ಕುಟುಂಬದ ಅಥವಾ ಬಡಕಾರ್ಮಿಕ ವರ್ಗದ ಹಿನ್ನೆಲೆ ಇರುವವರಾಗಿರುತ್ತಾರೆ. ಇಂತಹ ದಯನೀಯ ಸ್ಥಿತಿಯ ಮಹಿಳೆಯರೆಲ್ಲ ದೇಶದ ಮೂಲೆ ಮೂಲೆಗಳಿಂದ ಬೆಂಗಳೂರಿಗೆ ಬಂದಿಳಿದಿದ್ದರು. 23 ರಾಜ್ಯಗಳಿಂದ ಪ್ರತಿ ಐನೂರು ಅಂಗನವಾಡಿ ಕಾರ್ಯಕರ್ತೆಯರಿಗೊಬ್ಬ ಪ್ರತಿನಿಧಿಯಂತೆ ಬಂದವರ ಸಂಖ್ಯೆ ಸಾವಿರ ದಾಟಿದರೆ ಕರ್ನಾಟಕ ರಾಜ್ಯಾದ್ಯಂತ ಸಮ್ಮೇಳನಕ್ಕೆ ಬೆಂಬಲ ಸೂಚಿಸಿ ಅಧಿವೇಶನವನ್ನು ಯಶಸ್ವಿಗೊಳಿಸಲು ಹತ್ತು ಸಾವಿರ ಕಾರ್ಯಕರ್ತೆಯರು ಸ್ವಂತ ಖರ್ಚಿನಲ್ಲಿ ರಾಜಧಾನಿ ಸೇರಿದ್ದರು.

ಅರ್ಥಪೂರ್ಣ ಸಮ್ಮೇಳನ


ಸಿಐಟಿಯು ಆಯೋಜಿಸಿದ್ದ ಈ ಸಮ್ಮೇಳನಕ್ಕೆ

ಪುಟ IV ನೋಡಿ

ಸಮ್ಮೇಳದ ಬಹಿರಂಗ ಸಭೆಯಲ್ಲಿ ಮಾತನಾಡುತ್ತಿರುವ ಮುಖಂಡರುಗಳು


ಕಾಂ. ಜಿ.ಎನ್.ನಾಗರಾಜ್
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ


ಕಾಂ. ವಿ.ಜೆ.ಕೆ.ನಾಯರ್
ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ



ಕಾಂ. ಜಿ.ವಿ.ಶ್ರೀರಾಮರೆಡ್ಡಿ
ಶಾಸಕರು, ಬಾಗೇಪಲ್ಲಿ



ಅಂಗನವಾಡಿಗಳು ಅನ್ನದಂಗಡಿಗಳಲ್ಲ...... ಅವು ಸಾಂಸ್ಕೃತಿಕ, ಶೈಕ್ಷಣಿಕ ಕೇಂದ್ರಗಳಾಗಲಿ

ಪ್ರೊ. ಬರಗೂರು ರಾಮಚಂದ್ರಪ್ಪ

ಖ್ಯಾತ ಬಂಡಾಯ ಸಾಹಿತಿಗಳೂ ಅಂಗನವಾಡಿ ನೌಕರರ ಸಮ್ಮೇಳನದ ಸ್ವಾಗತ ಸಮಿತಿಯ ಗೌರವಾಧ್ಯಕ್ಷರೂ ಆದ ಪ್ರೊ.ಬರಗೂರು ರಾಮಚಂದ್ರಪ್ಪನವರು ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮಾಡಿದ ಮಹತ್ವದ ಸ್ವಾಗತ ಬಾಷಣದ ಪೂರ್ಣ ಪಾಠವನ್ನು ಇಲ್ಲಿ ನೀಡಲಾಗಿದೆ.



ಆತ್ಮೀಯ ಸಂಗಾತಿಗಳೇ,

ನಾನು ನಿಮ್ಮೆಲ್ಲರನ್ನೂ 5ನೇ ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಮ್ಮೇಳನಕ್ಕೆ ಹೃದಯಪೂರ್ವಕವಾಗಿ ಸ್ವಾಗತಿಸುತ್ತೇನೆ.

ನಾಲ್ಕು ದಿನಗಳ ಈ ಸಮ್ಮೇಳನದ ಅರ್ಥಪೂರ್ಣ ಚರ್ಚೆಗಳು ಭವಿಷ್ಯದ ಕಾರ್ಯಾಚರಣೆಗೆ ಮಾರ್ಗದರ್ಶಕವಾಗಲಿದೆ.

ಅಂಗನವಾಡಿಗಳು ಕೇವಲ ಬಾಲವಾಡಿ ಕೇಂದ್ರಗಳಲ್ಲ. ಬದಲಿಗೆ ಬಹುಮುಖಿಯಾಗಿ ಕಾರ್ಯಾಚರಿಸುವ ಸಂಸ್ಥೆಗಳು. ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಮಸ್ಯೆಗಳು ತತ್‌ಕ್ಷಣ ಪರಿಹಾರವಾಗಬೇಕೆಂಬ ಬಗ್ಗೆ ಯಾವುದೇ ಎರಡನೇ ಆಲೋಚನೆಗೆ ಅವಕಾಶವಿಲ್ಲ. ಆದರೆ ಅದೇ ಸಮಯದಲ್ಲಿಯೇ ಈ ಅಂಗನವಾಡಿಗಳನ್ನು ಶೈಕ್ಷಣಿಕ, ಸಾಂಸತಿಕ ಕೇಂದ್ರಗಳನ್ನಾಗಿ ರೂಪಿಸಬೇಕೆಂಬ ವಿಚಾರವನ್ನು ಯಾರೂ ಮರೆಯಬಾರದು. ಈ ವಿಚಾರದ ಬಗ್ಗೆ ಆಳವಾಗಿ ಚಿಂತಿಸಬೇಕಾಗಿದೆ.

ರಾಷ್ಟ್ರದಲ್ಲಿಂದು 6 ಲಕ್ಷ ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು 5,38,43,047 ಮಕ್ಕಳು ಇದನ್ನು ಆಶ್ರಯಿಸಿದ್ದಾರೆ.

ಈ ಅಂಗನವಾಡಿಗಳ ಮೂಲಕ 76,47,934 ಗರ್ಭಿಣಿ ಮತ್ತು ಬಾಣಂತಿಯರು ಪೌಷ್ಟಿಕ ಆಹಾರ ಪಡೆಯುತ್ತಿದ್ದಾರೆ. ಇದರಿಂದಾಗಿ ಅಂಗನವಾಡಿಗಳನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕೇಂದ್ರಗಳನ್ನಾಗಿ ಬಿಂಬಿಸಬೇಕಿದೆ. ಆದರೆ ಈ ವಿಚಾರದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಎಂಬ ಅಂಶಕ್ಕೆ ಆದ್ಯತೆ ಕುಗ್ಗಿಸಿ, ಆಹಾರ ವಿತರಣೆಯ ಅಂಶಕ್ಕೆ ಒತ್ತು ನೀಡಲಾಗಿದೆ. ಆರು ವರ್ಷ ವಯೋಮಾನದೊಳಗಿನ ಮಕ್ಕಳಿಗೆ ಅನ್ನ ವಿತರಿಸುವ ಕೇಂದ್ರಗಳಂತೆ ಕೆಲಸ ಮಾಡುತ್ತಿರುವ ಅಂಗನವಾಡಿಗಳಿಗೆ ಶೈಕ್ಷಣಿಕ ಆಯಾಮ ನೀಡಬೇಕಾದ ಅಗತ್ಯವಿದೆ.

ಆರ್ಥಿಕವಾಗಿ ಬಲಾಢ್ಯರಾದ ವಿಭಾಗಗಳ ಮಕ್ಕಳು 'ಶಿಶು ವಿಹಾರ' (Kinder Garden)ಗಳಿಗೆ ಹೋಗುತ್ತಾರೆ. ಗ್ರಾಮೀಣ ಬಡವರು ಮತ್ತು ನಗರಗಳ ಗುಡಿಸಲು ನಿವಾಸಿಗಳ ಮಕ್ಕಳು ಅಂಗನವಾಡಿಗಳಲ್ಲಿ ವಿತರಿಸುವ ಅನ್ನಕ್ಕಾಗಿ ಎದುರು ನೋಡುತ್ತಾರೆ. ಬಡವರ ಮಕ್ಕಳು 'ಅನ್ನದಂಗಡಿ'ಗಳಲ್ಲಿ ನಲುಗುತ್ತಿದ್ದರೆ ಶ್ರೀಮಂತರ ಮಕ್ಕಳು 'ಅಕ್ಷರದ ಅಂಗಡಿ'ಗಳಲ್ಲಿ ಶಿಕ್ಷಿತರಾಗುತ್ತಿದ್ದಾರೆ.

ಈ ದೇಶದಲ್ಲಿ ಶೈಕ್ಷಣಿಕ ತಾರತಮ್ಯಗಳು ಶೈಶವ ಹಂತದಿಂದಲೇ ಆರಂಭವಾಗುತ್ತವೆ. ಈ ಶಿಶು ವಿಹಾರಗಳು ಮತ್ತು ಅಂಗನವಾಡಿಗಳೆರಡನ್ನು ಸಮಾನವಾಗಿ ನೋಡಬೇಕಾಗಿದೆ ಮತ್ತು ಇದನ್ನು ಅಧಿಕೃತಗೊಳಿಸಿ ಏಕರೂಪಕ್ಕೆ ತರಬೇಕಿದೆ. ಪ್ರಾಥಮಿಕ ಶಿಕ್ಷಣದಲ್ಲಿನ ಈ ತಾರತಮ್ಯವನ್ನು ನಿವಾರಿಸಿ ಅಂಗನವಾಡಿ ಕೇಂದ್ರಗಳನ್ನು ಸಾಂಸತಿಕ ಕೇಂದ್ರಗಳನ್ನಾಗಿ ರೂಪಿಸಬೇಕಿದೆ. ಜಾಗತೀಕರಣದ ಪರಿಣಾಮವಾದ ಆರ್ಥಿಕ ಅಸಮಾನತೆಯ ಬೆಳವಣಿಗೆಯು ಸಾಂಸತಿಕ ರಂಗದ ಮೇಲೂ ತನ್ನ ಕರಿನೆರಳನ್ನು ಚಾಚಿದೆ. ಮಕ್ಕಳನ್ನು ಸಾಂಸತಿಕ ರಂಗದಲ್ಲಿ ಕ್ರಿಯಾಶೀಲಗೊಳಿಸಲು ಇದು ಸರಿಯಾದ ಸಮಯ. ಈ ಸಂಬಂಧ ನೀತಿ ನಿರ್ಧಾರ ಕೈಗೊಳ್ಳಬೇಕಿದೆ. ಇದರಿಂದ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವಂತಹವರಾಗಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ನೌಕರರಿಗೆ ಉದ್ಯೋಗ ಖಾತ್ರಿಯೂ ಸಿಗುತ್ತದೆ.

ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸ್ಥಿತಿ ಶೋಚನೀಯವಾಗಿದೆ. ಅವರು ಮಾಸಿಕ 700 ಮತ್ತು 300 ರೂ.ಗಳ ನಿಕೃಷ್ಟ ವೇತನ ಪಡೆಯುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ 80,000 ಕಾರ್ಯಕರ್ತೆಯರು ಸಹಾಯಕಿಯರು ಹೀಗೆ ಅತಂತ್ರ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಅವರನ್ನು ಅಂಗನವಾಡಿಗಳ ಹೊರತಾದ ಕೆಲಸಗಳಲ್ಲೂ ಬಳಸಲಾಗುತ್ತಿದೆ. ತಮ್ಮ ನಾಲ್ಕು ಗಂಟೆಗಳ ಕೆಲಸವಲ್ಲದೆ, ಸಾಕ್ಷರತಾ ಕಾರ್ಯಕ್ರಮ, ಸರ್ವಶಿಕ್ಷಣ ಅಭಿಯಾನ, ಸಣ್ಣ ಉಳಿತಾಯ, ಸಮೂಹವಿಮಾ ಯೋಜನೆ, ಗ್ರಾಚ್ಯುಟಿ ನಿಧಿ, ವೃದ್ಧಾಪ್ಯವೇತನ ವಿತರಣೆ ಜನಗಣತಿ ಇತ್ಯಾದಿಗಳ ಸಂಬಂಧ ಅವಧಿ ಮೀರಿ ಇವರನ್ನು ದುಡಿಸಿಕೊಳ್ಳಲಾಗುತ್ತಿದೆ. ಇಷ್ಟಾದರೂ ಅವರು ತಾವು ಪಡೆಯುವ ಕನಿಷ್ಟ ಪ್ರತಿಫಲ ಪಡೆಯಲೂ ಕೈಚಾಚಿ ಕಾಯಬೇಕಿದೆ. ಕೆಲವೊಮ್ಮೆ ಮೂರೂ ತಿಂಗಳಿಗೆ ಒಂದು ಬಾರಿ ಹಣ ಪಡೆಯುವ ಉದಾಹರಣೆಗಳೂ ಇವೆ.

ಅಂಗನವಾಡಿಗಳ ಪರಿಕಲ್ಪನೆಗೆ ಒಂದು ಸಮಗ್ರ ಕಾಯಕಲ್ಪ ನೀಡಿದಲ್ಲಿ ಈ ಸಂಬಂಧದ ಹಲವು ಸಮಸ್ಯೆಗಳು ಪರಿಹಾರವಾಗಲು ಸಾಧ್ಯ ಎಂದು ನಾನು ಬಲವಾಗಿ ನಂಬುತ್ತೇನೆ. ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಉದ್ದೇಶಗಳನ್ನು ಬೆಂಬಲಿಸುವಾಗಲೇ ಅಂಗನವಾಡಿಗಳ ಶೈಕ್ಷಣಿಕ ಆಯಾಮಗಳ ಬಗೆಗೆ ಮತ್ತು ಬಡವರ ಮಕ್ಕಳಿಗೆ ಉತ್ತಮ ಶಿಕ್ಷಣದ ಬಗೆಗೆ ಯೋಚಿಸಬೇಕಿದೆ. ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರು ಹಾಗೂ ಮಕ್ಕಳ ನೆಲೆಯಿಂದ ನಾವು ಅಂಗನವಾಡಿಗಳ ಸಂರಚನೆಯನ್ನು ಬದಲಿಸಬೇಕಿದೆ. ಮತ್ತು ಅವುಗಳಿಗೆ ಶೈಕ್ಷಣಿಕ ಸಂಸ್ಥೆಗಳಿಗೆ ಸಮಾನವಾದ ಸ್ಥಾನಮಾನಗಳನ್ನು ನೀಡಿ ಕಾರ್ಯಕರ್ತೆ, ಸಹಾಯಕಿಯರಿಗೆ ಉದ್ಯೋಗ ಖಾತ್ರಿ ಒದಗಿಸಬೇಕಿದೆ. ನಾನು ಈ ಸಮ್ಮೇಳನವು/ ಅಂಗನವಾಡಿ ಯನ್ನು ಪೂರ್ವ ಪ್ರಾಥಮಿಕ ಶೈಕ್ಷಣಿಕ ವ್ಯವಸ್ಥೆ ಎಂದು ಪರಿಗಣಿಸುತ್ತದೆಂದು ಆಶಿಸುತ್ತೇನೆ... (ಮುಂದಿನ ಭಾಗ ಮುಖಂಡರು, ಪ್ರತಿನಿಧಿಗಳನ್ನು ಸ್ವಾಗತಿಸುವ ಮಾತುಗಳು) ○

ಸಾಂಸತಿಕ ಕಾರ್ಯಕ್ರಮಗಳು

ನೆಲದ ಹಾಳೆಯಲಿ... ಬೆವರ ಹನಿಗಳಲಿ... ನೀನು ಬರೆದ ಕವನ

ಜ್ಞಾನಪೀಠ ಪ್ರಶಸ್ತಿ ವಿಜೇತ, ರಾಷ್ಟ್ರಕವಿ ಕುವೆಂಪುರವರ ರಚನೆಯಾದ "ಸರ್ವರಿಗೂ ಸಮಬಾಳು-ಸರ್ವರಿಗೂ ಸಮಪಾಲು" ಎಂಬ ನವಯುಗವಾಣಿ ಘೋಷಿಸಿದೆ ಕೇಳಿ, ಯುಗಾಯುಗದ ದಾರಿದ್ರ್ಯ ಭಾರದಿಂ ಬೆನ್‌ಬಾಗಿ ಗೋಳಿಡುವ ಬಡಜನರೆ ಏಳಿರೈ ಏಳಿ!" ಎಂಬ ಸಂದೇಶದೊಂದಿಗೆ ನವೆಂಬರ್ 8ರಂದು ಬೆಳಿಗ್ಗೆ ಅಂಗನವಾಡಿ 6ನೇ ರಾಷ್ಟ್ರೀಯ ಸಮ್ಮೇಳನ ಆರಂಭವಾಯಿತು. ಇದರೊಂದಿಗೆ ಮನಸೂರೆಗೊಂಡ ಮತ್ತೊಂದು ಹಾಡು ಶಾಯಿದ್ ಲೂದಿಯಾನ್ವಿಯವರ 'ಹೋ ಶುಭಾಹ್ ಕಬೀ ಹೋಜಾಯೇಗಿ' ಸಮುದಾಯದ ಗಜಾನನ ಮತ್ತು ವಾದ್ಯ ತಂಡದಿಂದ ತರಬೇತಿ ಪಡೆದ ಅಂಗನವಾಡಿ ಹೆಣ್ಣುಮಕ್ಕಳು ಅತ್ಯಂತ ಭಾವಪೂರ್ಣವಾಗಿ ಹಾಡಿದುದು ಪ್ರತಿನಿಧಿಗಳ ಮೆಚ್ಚುಗೆಯನ್ನು ಪಡೆಯಿತು.

ಅದೇ ದಿನ ಮಧ್ಯಾಹ್ನದ ರ್‍ಯಾಲಿಯ ನಂತರದ ಬಹಿರಂಗ ಸಭೆಯ ಆರಂಭದಲ್ಲಿ ಕರ್ನಾಟಕದ ಜಾನಪದ ಪ್ರಾಕಾರಗಳಲ್ಲಿ ಒಂದಾದ ಡೊಳ್ಳು ಕುಣಿತ ಕಾರ್ಯಕ್ರಮವಿತ್ತು. ಇದರ ವೈಶಿಷ್ಟ್ಯತೆ ಎಂದರೆ ಮಹಿಳೆಯರು ಡೊಳ್ಳು ಕುಣಿತ ಮಾಡಿದ್ದು. ಇತ್ತೀಚಿನವರೆಗೂ ಈ ಕಲೆ ಪುರುಷ ಪ್ರಧಾನವಾಗಿತ್ತು. 10 ಕೆ.ಜಿ ತೂಕದ ಡೊಳ್ಳನ್ನು ಮಹಿಳೆಯರು ಹೊತ್ತುಕೊಂಡು ಗಂಟೆಗಟ್ಟಲೆ ಕುಣಿಯಬಲ್ಲರೇ ಎಂಬ ಪ್ರಶ್ನೆಗಳನ್ನು ಮೀರಿ ನಿಂತವರು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಸುಜಾತ ಮೂರ್ತಿ ನೇತೃತ್ವದ ಮೈತ್ರಿ ಮಹಿಳಾ ಮಂಡಳಿಯ ಸದಸ್ಯರು, ಸುಮಾರು 40 ನಿಮಿಷ ನಿರಂತರ ಡೊಳ್ಳು ಕುಣಿತದ ಹೆಜ್ಜೆಗಳ ಮೂಲಕ ನೆರೆದಿದ್ದ ಸಾವಿರಾರು ಜನರ ಗಮನ ಸೆಳೆದರಲ್ಲದೇ ಮಾಧ್ಯಮದವರನ್ನು ದಂಗುಬಡಿಸಿದರು. ಈ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರದ ಜಾನಪದ ಮತ್ತು ಯಕ್ಷಗಾನ ಅಕಾಡಮಿ ಪ್ರಾಯೋಜಿಸಿತ್ತು. ತದನಂತರ ಅಂಗನವಾಡಿ ಹೆಣ್ಣುಮಕ್ಕಳ ಹಾಡಿನ ತಂಡದಿಂದ

"ಕೆಂಬಾವುಟಾ ಆಸರೆಯಾಗಲು
ಎದ್ದು ಬಾರೆ ಓ ಅಕ್ಕಾ
ಅಂಗನವಾಡಿ ಅಕ್ಕ....
ಶ್ರಮ ಜೀವಿ ಅಕ್ಕ..." ಎಂಬ ಹಾಡು ಮೂಡಿಬಂತು

ನವೆಂಬರ್ 9ರಂದು ರಾತ್ರಿ 8.30ಕ್ಕೆ ಕರ್ನಾಟಕದ ಜನಪರರಂಗ ತಂಡ 'ಸಮುದಾಯ'ದ ವತಿಯಿಂದ 'ಭಾಂವ್ರಿ' ನಾಟಕವಿತ್ತು. ರಾಜಸ್ಥಾನದ ಅಂಗನವಾಡಿ ಕಾರ್ಯಕರ್ತೆ ಅದೇ ಊರಿನಲ್ಲಿ ನಡೆಯುತ್ತಿದ್ದ ಬಾಲ್ಯವಿವಾಹ ತಡೆದುದಕ್ಕೆ, ಅದೇ ಊರಿನ ಪಟೇಲಾ ಹಾಗೂ ಸಹಚರರಿಂದ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾದರೂ ಹೋರಾಟವನ್ನು ಮುಂದುವರೆಸಿ, ಸಾಮಾಜಿಕ ಬದಲಾವಣೆಗೆ ಆ ಮೂಲಕ ಹೊಸ ಕಾನೂನೊಂದು ಬರಲು ಕಾರಣಳಾದ ಭಾಂವ್ರಿ ಕುರಿತ ನಾಟಕವಾಗಿತ್ತು. ಈ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಾಯೋಜಿಸಿತ್ತು.

ನವೆಂಬರ್ 10ರಂದು ರಾತ್ರಿ 8.30ಕ್ಕೆ ಗೀತ ಚಿತ್ರ ಕಾರ್ಯಕ್ರಮವಿತ್ತು. ಗಾಯಕ ಗಣೇಶ ದೇಸಾಯಿಯವರು "ನೆಲದ ಹಾಳೆಯಲಿ ಬೆವರ ಹನಿಗಳಲಿ", ಹಚ್ಚಬ್ಯಾಡಾ ಹಚ್ಚಬ್ಯಾಡವ್ವಾ, "ಬಿಡಕ್ಕಾ ನನ್ನನ್ನು...." ಎಂಬ ಪ್ರಗತಿಪರ ವಿಚಾರಧಾರೆಯುಳ್ಳ ಹಾಡುಗಳನ್ನು ಹಾಡುವ ಸಂದರ್ಭದಲ್ಲೇ ಕಲಾವಿದ ರಾಜೇಶ್ ದೇಸಾಯಿಯವರು ಆ ವಿಷಯಕ್ಕೆ ಸಂಬಂಧಿಸಿದಂತೆ ಚಿತ್ರ ಬಿಡಿಸುತ್ತಿದ್ದರು. ಈ ಕಾರ್ಯಕ್ರಮ ಹೊಸ ಪ್ರಯೋಗವಾಗಿದ್ದರೂ ಬಹಳಷ್ಟು ಪ್ರೇಕ್ಷಕರ ಮೆಚ್ಚುಗೆಯನ್ನು ಪಡೆಯಿತು. ಇದೇ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿರುವ ಬಂಗಾಳಿ ವಿದ್ಯಾರ್ಥಿ ಮಹಮ್ಮದ್ ಉಮರ್, ಗಿಟಾರ್, ವಾದ್ಯದೊಂದಿಗೆ ಬಂಗಾಳಿ ಹಾಗೂ ಹಿಂದಿ ಹಾಡುಗಳನ್ನು ಹಾಡಿದರು.

ತದನಂತರ ಪ್ರೊ ಬರಗೂರು ರಾಮಚಂದ್ರಪ್ಪನವರು ನಿರ್ದೇಶಿಸಿದ ಗಿನ್ನೀಸ್ ದಾಖಲೆ ಹೆಗ್ಗಳಿಕೆಯ ಶಾಂತಿ ಚಲನಚಿತ್ರ ಪ್ರದರ್ಶನವಿತ್ತು.



5ನೇ ರಾಷ್ಟ್ರೀಯ ಸಮ್ಮೇಳನದ ಪ್ರಯುಕ್ತ, ನವೆಂಬರ್ 6 ರಂದು ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಮಹಿಳೆ ಕುರಿತು ಕಲಾ ಶಿಬಿರವಿತ್ತು. ನಗರದ 20 ಯುವ ಕಲಾವಿದರು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಕಲಾ ಶಿಬಿರವನ್ನು ಕೆನ್ ಸ್ಕೂಲ್ ಆಫ್ ಆರ್ಟ್ಸ್ ಕಾಲೇಜಿನ ಪ್ರಾಂಶುಪಾಲರಾದ ಜೆ.ಎಮ್.ಎಸ್ ಮಣಿಯವರು ಉದ್ಘಾಟಿಸಿದರು. ಅತಿಥಿಗಳಾಗಿ ಹಿಮಾಚಲ ಪ್ರದೇಶದ ಸಿಐಟಿಯು ಮುಖಂಡರಾದ ಕಾಂ.ಠಾಕೂರ್ ಸಿಂಗ್ ರವರು ಭಾಗವಹಿಸಿದ್ದರು. ಪ್ರಾಸ್ತಾವಿಕವನ್ನು ಕಾಂ.ವರಲಕ್ಷ್ಮಿ ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿಯವರು ನಡೆಸಿಕೊಟ್ಟರು. ಕಲಾ ಶಿಬಿರದ ಸಂಚಾಲಕ ರಾಜೇಶ್ ದೇಸಾಯಿ ನಿರೂಪಣೆ ಮಾಡಿದರು. ಮಹಿಳೆ ಮತ್ತು ಶಿಕ್ಷಣ, ಮಹಿಳೆ ಮತ್ತು ಕೋಮುವಾದ, ಮಹಿಳೆ ಮತ್ತು ಯುದ್ಧ-ಶಾಂತಿ, ಮಹಿಳೆ ಮತ್ತು ಉದ್ಯೋಗ, ಮಹಿಳೆ ಮತ್ತು ಸಬಲೀಕರಣ ಕುರಿತು ಕಲಾವಿದರಿಗೆ ವಿಷಯಗಳನ್ನು ನೀಡಲಾಗಿತ್ತು.

ಕಲಾ ಶಿಬಿರದ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ 'ಅರ್ಥ' ಚಲನಚಿತ್ರ ಹಾಗೂ 'ನಾಕು ತಂತಿ' ಧಾರಾವಾಹಿಯ ನಿರ್ದೇಶಕರೂ ಪ್ರಗತಿಪರ ಚಿಂತಕರೂ ಆದ ಬಿ.ಸುರೇಶ್‌ರವರೂ, ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಬಾಗೇಪಲ್ಲಿಯ ಶಾಸಕರೂ ಆದ ಕಾಂ.ಜಿ.ವಿ.ಶ್ರೀರಾಮರೆಡ್ಡಿಯವರೂ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಕಾಂ.ಕೆ.ಎಸ್.ವಿಮಲಾರವರು ಭಾಗವಹಿಸಿದ್ದರು.

ಈ ಎಲ್ಲಾ ಕಾರ್ಯಕ್ರಮಗಳನ್ನು ಸ್ವಾಗತ ಸಮಿತಿಯ ಉಪಸಮಿತಿಯಾದ ಸಾಂಸ್ಕೃತಿಕ ಸಮಿತಿ ಯೋಜಿಸಿತ್ತು.

-ಕೆ.ಎಸ್.ಲಕ್ಷ್ಮಿ.







ಅಂಗನವಾಡಿ ನೌಕರರ ಸಮ್ಮೇಳನ

AIFAWH

ಅನುಭವಗಳ ಮಥನ ಚಳುವಳಿಯ ಮುನ್ನಡೆಯ ಹೊಳಹು

20 ರಾಜ್ಯಗಳಿಂದ ಬಂದ 561 ಪ್ರತಿನಿಧಿಗಳ ಪರವಾಗಿ 36 ಮಂದಿ ಭಾಗವಹಿಸಿದ ಚರ್ಚೆಯ, ನಿವೇದಿಸಿದ ಅನುಭವಗಳ ಒಂದು ಇಣುಕು ನೋಟ.

"ಅಧಿಕಾರ ಮಹಿಳೆಯರದ್ದೇ, ಆದರೆ ಶೋಷಣೆ ಮಾತ್ರ ತಪ್ಪಿಲ್ಲ"

-ರಾಜಸ್ತಾನ ಪ್ರತಿನಿಧಿ

ರಾಜಸ್ತಾನದಲ್ಲಿ ಮುಖ್ಯಮಂತ್ರಿ, ರಾಜ್ಯಪಾಲರು ಹಾಗೂ ಅಸೆಂಬ್ಲಿ ಸ್ಪೀಕರ್ ಎಲ್ಲಾ ಮಹಿಳೆಯರೇ. ಆದ್ರೆ ಮಹಿಳೆಯರ ಮೇಲಿನ ದೌರ್ಜನ್ಯ, ಲೈಂಗಿಕ ಕಿರುಕುಳ ಮಾತ್ರ ದಿನೇ ದಿನೇ ಹೆಚ್ಚುತ್ತಿರುವುದು ಆತಂಕದ ವಿಷಯ. ಜಾತೀಯತೆ, ಪರ್ದಾ ಪದ್ಧತಿ ಜೀವಂತವಾಗಿರುವ ಇಲ್ಲಿ ಅರೆ ಪಾಳೆಗಾರಿ ಭೂಮಾಲಕರಿಂದ ಸಮಾಜದಲ್ಲಿ ಉಸಿರುಗಟ್ಟುವ ವಾತಾವರಣವಿದೆ. ಪಂಚಾಯ್ತಿ ಅಧೀನದಲ್ಲಿ ಅಂಗನವಾಡಿ ನೌಕರರಿದ್ದರಿಂದ ಗೌರವಧನ ಬಹಳಷ್ಟು ತಿಂಗಳಿಂದ ಬಂದೇ ಇಲ್ಲ. ಈ ಕುರಿತು ಸರ್ಕಾರ ಮೌನ ತಾಳಿದೆ ಒಂದೇ ಮನೆಯ 2 ಜನ ಅಂಗನವಾಡಿ ಕೆಲಸ ಮಾಡುವಂತಿಲ್ಲ ಎಂದು ರಾಜಸ್ತಾನದ ಪ್ರತಿನಿಧಿ ಕಾ.ಹಜಾರಿಲಾಲ್ ಹೇಳುತ್ತಾರೆ. ಶಿಕಾರ, ಅಲ್ವರ, ಜೋಧಪುರದಲ್ಲಿ ಮತ್ತು ನಮ್ಮ ಸಂಘವಿದೆ.

ಕಾಂ.ವೀರೇಂದ್ರ ಸಿಂಗ್ ಮಲಿಕ ತಮ್ಮ ರಾಜ್ಯದ ಪರಿಸ್ಥಿತಿ ಹೇಳುವುದು ಹೀಗೆ... ಹದಿನೈದು ವರ್ಷಗಳ ಹಿಂದೆ ಸಿಐಟಿಯುನ ಯೋಜಿತ ಕೆಲಸದಿಂದಾಗಿ ಹರ್ಯಾಣದಲ್ಲಿ 15 ಜಿಲ್ಲೆಗಳಲ್ಲಿ ನಮ್ಮ ಸಂಘ ವ್ಯಾಪಕ ಪ್ರಭಾವ ಹೊಂದಿದೆ. ಸ್ಥಳೀಯವಾಗಿ ಅಂಗನವಾಡಿ ನೌಕರರು ಚಳುವಳಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಭಾಗವಹಿಸುತ್ತಾರೆ. ಕಳಪೆ ಪೂರಕ ಪೌಷ್ಟಿಕ ಆಹಾರದ ಪೂರೈಕೆ ಮತ್ತು ಭ್ರಷ್ಟಾಚಾರ ತಾಂಡವವಾಡುತ್ತಿದೆ. ಬ್ಲಾಕ್ ಡೆವಲಪ್‌ಮೆಂಟ್ ಮತ್ತು ಪಂಚಾಯತ್ ಅಧಿಕಾರಿಯೇ ಲೈಂಗಿಕ ಕಿರುಕುಳ ನೀಡಿದ ದುರ್ಘಟನೆ ವಿರುದ್ಧ ಆತನ ಅಮಾನತ್ತಿಗಾಗಿ 40 ದಿನಗಳಿಂದ ವ್ಯಾಪಕ ಹೋರಾಟ ನಡೆಯುತ್ತಿದೆ.

20 ವರ್ಷಗಳ ಸೇವೆಯ ನಂತರ ನಿವೃತ್ತರಾದಾಗ ಕಾರ್ಯಕರ್ತೆಯರಿಗೆ 1000, ಸಹಾಯಕಿಗೆ 500 ರೂ ನಿವೃತ್ತಿ ವೇತನ ಎಂದು ನಿಗದಿಪಡಿಸಿತು. ಆದರೆ ಕಾರ್ಯಕರ್ತೆಯರಿಂದ 100 ಸಹಾಯಕಿಯರಿಂದ 50 ರೂ ಕಡಿತಕ್ಕೆ ಆದೇಶಿಸಿದ್ದರಿಂದ ಇದರ ವಿರುದ್ಧ ಹೋರಾಟ ಮತ್ತೆ ಸಾಗಿದೆ. ಈಗ ಸರ್ಕಾರವೇ 200 +100ರಂತೆ ಹೆಚ್ಚಿಸಿ ಇದರಲ್ಲಿ ಕಡಿತ ಮಾಡಲು ಸೂಚಿಸಿದೆ. ಹಾಗಾಗಿ ಈ ಚಳಿಗಾಲದ ಅಧಿವೇಶನದಲ್ಲಿ ರ್‍ಯಾಲಿ ನಡೆಸಲು ಬಜೆಟ್ ಅಧಿವೇಶನದಲ್ಲಿ ಧರಣಿ ನಡೆಸಲು ತೀರ್ಮಾನಿಸ ಲಾಗಿದೆ ಎಂದು ಶುಭಾಶಮೀಮ್ ತಿಳಿಸಿದರು.

ಮಧ್ಯಪ್ರದೇಶ : ಕೈ ಕತ್ತರಿಸಿದ ಗೂಂಡಾಗಳು

ಬಾಲ್ಯವಿವಾಹ ತಡೆಗಟ್ಟುವುದು. ವೈಜ್ಞಾನಿಕ ಅರಿವು ಮೂಡಿಸಿ ಸಮಾಜ ಸುಧಾರಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ನಮ್ಮ ಕರ್ತವ್ಯ. ಆದರೆ ಮಧ್ಯಪ್ರದೇಶದಲ್ಲಿ ಶಕುಂತಲಾ ವರ್ಮಾ ಬಾಲ್ಯವಿವಾಹ ನಿಲ್ಲಿಸಲು ಸ್ಥಳಕ್ಕೆ ಹೋದಾಗ ಅಲ್ಲಿ ನೆರೆದ ಭೂಮಾಲಕ ಗೂಂಡಾಗಳು ಆಕೆಯ ಮೇಲೆ ಹಲ್ಲೆ ನಡೆಸಿ, ಕೈಯನ್ನೇ ಕತ್ತರಿಸಿದರು. ಈ ಪಾತಕಿಗಳಿಗೆ ಆಶ್ರಯ ಕೊಟ್ಟಿರುವುದು ಮಹಿಳೆಯನ್ನು ವೈಭವೀಕರಿಸುವ ಅಲ್ಲಿಯ ಬಿಜೆಪಿ ಸರ್ಕಾರ!

ಪ್ರಜಾಸತ್ತಾತ್ಮಕ ಚಳುವಳಿಯನ್ನು ಹತ್ತಿಕ್ಕಿ, ದುಡಿಯುವ ವರ್ಗದ ವಿರುದ್ಧವೇ ಕತ್ತಿ ಮಸೀತಿದೆ. ಇಂಥ ಸಂದರ್ಭದಲ್ಲಿ ನಮ್ಮ ಸಂಘಟನೆ ಕೆಲಸಗಳಿಗೆ ಒಂದೆಡೆ ಆಡಳಿತ ಪಕ್ಷ ಮತ್ತೊಂದೆಡೆ ಉಗ್ರಗಾಮಿಗಳು ತೊಡಕಾಗಿದ್ದಾರೆ. ನೌಕರರ ಗೌರವಧನದ ನಾಲ್ಕು ಶೇಕಡರಷ್ಟನ್ನು ಸಿಡಿಪಿಒಗಳೇ ಕಡಿತ ಮಾಡಿ ಉಗ್ರಗಾಮಿಗಳಿಗೆ ಕೊಡುತ್ತಾರೆ.



ಗುಂಪು ಚರ್ಚೆ ನಿರತ ಪ್ರತಿನಿಧಿಗಳು

ನಾವು ಚುನಾವಣೆಯಲ್ಲಿ ಅಂಗನವಾಡಿ ನೌಕರರು

ತ್ರಿಪುರಾದಲ್ಲಿ ಪ್ರಜಾಸತ್ತಾತ್ಮಕ ಚಳುವಳಿ ಗಟ್ಟಿಯಾಗಿದೆ. ಬಾಂಗ್ಲಾಗಡಿಯಲ್ಲಿ ಭಯೋತ್ಪಾದಕರ ಮತ್ತು ಕೋಮುವಾದಿಗಳ ಅಟ್ಟಹಾಸ ಜೋರಾಗಿದೆ. ಕೇಂದ್ರ ಸರ್ಕಾರ ತಂದಿರುವ ಉದಾರೀಕರಣ ನೀತಿ ಸರ್ವನಾಶಕ್ಕೆ ಜನತೆಯನ್ನು ದೂಡುತ್ತದೆಂಬ ರಾಜಕೀಯ ಪ್ರಜ್ಞೆಯೊಂದಿಗೆ ನಮ್ಮ ಎಡರಂಗ ಸರ್ಕಾರ ಅಂಗನವಾಡಿ ನೌಕರರ ಮತ್ತು ಮಕ್ಕಳ ಮಹಿಳೆಯರ ಕುರಿತು ಅಪಾರ ಕಾಳಜಿ ವಹಿಸಿದೆ. ಅಂಗನವಾಡಿ ನೌಕರರು ಚುನಾವಣೆಯಲ್ಲಿ ನಿಂತು ಗೆಲ್ಲುತ್ತೇವೆ. ಜೀವದ ಹಂಗು ತೊರೆದು ಜನರ ಸರ್ಕಾರ ರಕ್ಷಿಸುತ್ತೇವೆ. ಈ ಸಾರಿ ಚುನಾವಣೆಯಲ್ಲಿ ಅಂಗನವಾಡಿ ನೌಕರರು ಸಾಕಷ್ಟು ಜನ ಗೆದ್ದು ನೀತಿ ನಿರ್ಧಾರಕ ಸ್ಥಾನ ಪಡೆದಿದ್ದಾರೆ. ಪಶ್ಚಿಮ ಬಂಗಾಳದಲ್ಲಿ 2 ಜನ ಎಮ್‌ಎಲ್‌ಎಗಳು ಅಂಗನವಾಡಿ ರಂಗದಿಂದ ಇದ್ದಾರೆ.



ವಿವಿಧ ರಾಜ್ಯಗಳ ಪ್ರತಿನಿಧಿಗಳ ಚರ್ಚೆ

"ನಮಗೆ ನಿವೃತ್ತಿ ವೇತನ ಬಂತು! ಆದರೆ.....?"

-ಮಹಾರಾಷ್ಟ್ರ ಪ್ರತಿನಿಧಿ

ಮಹಾರಾಷ್ಟ್ರದಲ್ಲಿ 370 ಅಂಗನವಾಡಿ ಪ್ರಾಜೆಕ್ಟ್‌ಗಳಲ್ಲಿ 1 ಲಕ್ಷ 30 ಸಾವಿರ ನೌಕರರು ಕೆಲಸ ನಿರ್ವಹಿಸುತ್ತಿದ್ದಾರೆ. ಐಸಿಡಿಎಸ್ ಕೆಲಸದ ಜೊತೆಗೆ ಮಹಿಳಾ ಮಂಡಳ, ಎಸ್‌ಹೆಚ್‌ಜಿ ರಚನೆ, ಗ್ರಾಮಸಭೆ ನಡೆಸಲು ಸಹಕರಿಸುವ ಇತ್ಯಾದಿ ಹೆಚ್ಚುವರಿ ಕೆಲಸಗಳನ್ನು ನಿರ್ವಹಿಸುತ್ತಾರೆ ಮತ್ತು 1 ತಾಸು ಹೆಚ್ಚುವರಿ ಕೆಲಸ. ಇತ್ತೀಚಿನ 3 ವರ್ಷಗಳ ಹೋರಾಟದಿಂದ ಸರ್ಕಾರ ಒಂದು ಪೆನ್ಶನ್ ಕಮಿಟಿ ಮಾಡಿ ಚರ್ಚಿಸಿ ವೇತನಸಹಿತ ನಿವೃತ್ತಿ ನೀಡಬೇಕು.

'ಅಲ್ಲಿ ಜನರ ಸರ್ಕಾರ' : ಪಶ್ಚಿಮ ಬಂಗಾಳ ಪ್ರತಿನಿಧಿಗಳ ಘೋಷಣೆ

ನಮ್ಮ ರಾಜ್ಯದಲ್ಲಿ ಈ ಸಾರಿ ವ್ಯಾಪಕ ಪ್ರಕೃತಿ ವಿಕೋಪ ಆಯ್ತು. ಚಂಡಮಾರುತ ಅತಿವೃಷ್ಟಿ ನೆರೆಹಾವಳಿ ಇತ್ಯಾದಿಗಳಲ್ಲಿ ಅಂಗನವಾಡಿ ನೌಕರರು ಸಂತ್ರಸ್ತರ ನೆರವಿಗೆ ದಾವಿಸುತ್ತೇವೆ. ಆದರೆ ಕೇಂದ್ರ ಸರ್ಕಾರ ಯಾವ ನೆರವನ್ನು ತುರ್ತಾಗಿ ನೀಡುತ್ತಿಲ್ಲ. ತೃಣಮೂಲ ನಮ್ಮ ಮೇಲೆ ದಾಳಿ ಮಾಡ್ತಿದೆ. ಪಶ್ಚಿಮ ಬಂಗಾಳ ರಾಜ್ಯದಲ್ಲಿ ಸಿಪಿಎಂ ನೇತೃತ್ವದ ಎಡರಂಗ ಸರ್ಕಾರ ದಿನನಿತ್ಯ ಜನರ ಕಷ್ಟಗಳಿಗೆ ಜೀವಂತವಾಗಿ ಸ್ಪಂದಿಸುತ್ತಿದೆ. ಅಂಗನವಾಡಿ ನೌಕರರಿಗೆ ನಿವೃತ್ತಿ ನಂತರ ಪಿ.ಎಫ್. ನೀಡುತ್ತಿದೆ. ಹಬ್ಬದ ಬೋನಸ್ ನೀಡುತ್ತದೆ. ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುತ್ತದೆ. ದೇಶದ ಎಲ್ಲೆಡೆಯೂ ಇಂಥದ್ದೇ 'ಜನರ ಸರ್ಕಾರ' ಬರಲಿ ಎಂಬುದು ಪಶ್ಚಿಮ ಬಂಗಾಳದ ಸಂಗಾತಿಗಳ ಹಾರೈಕೆ.

ಆಸ್ಸಾಂನಲ್ಲಿ ಉಗ್ರಗಾಮಿಗಳಿಗೆ ಪ್ರಾಜೆಕ್ಟ್ ಹಣ!

ಆಸ್ಸಾಂ ಉಲ್ಫಾ ಉಗ್ರಗಾಮಿಗಳ ಘೋರ ತಾಣ. ಆಡಳಿತದಲ್ಲಿ ಕಾಂಗ್ರೆಸ್ ಸರಕಾರ

'ಪಾಂಡಿಚೇರಿಯಲ್ಲಿ ರೆಗ್ಯೂಲರ್ ನೌಕರರು'

ನಮ್ಮದು ಚಿಕ್ಕ ಕೇಂದ್ರಾಡಳಿತ ಪ್ರದೇಶ. ಆದ್ರೂ ಹೋರಾಟಕ್ಕೆ ನಾವೇನು ಕಡಿಮೆ ಇಲ್ಲ. ಶೇ.10 ಸದಸ್ಯತ್ವ. ಹಾಗೇ ಶೇ.100 ಖಾಯಮಾತಿಗೆ ನಿರಂತರ ಹೋರಾಟ ನಡೀತಿದೆ. ಸದ್ಯದಲ್ಲೇ 21 ದಿನಗಳ ಹೋರಾಟದ ನಂತರ ನಮ್ಮನ್ನು ರೆಗ್ಯುಲರ್ ಎಂಪ್ಲಾಯೀಸ್ ಅಂತ ಪರಿಗಣಿಸಿದ್ದಾರೆ. ನಮ್ಮಲ್ಲಿ ಕಾರ್ಯಕರ್ತೆಗೆ 5,500, ಸಹಾಯಕಿಗೆ 4,500 ರೂ. ಪಗಾರ ಬರುತ್ತದೆ!


ಪ್ರಧಾನ ಕಾರ್ಯದರ್ಶಿ ಹೇಮಲತಾ

ಸಂಘಟನೆ ನಮ್ಮ ಅಸ್ತ್ರ, ಹೋರಾಟ ನಮ್ಮ ಹಾದಿ. ಸಂಘಟನಾತ್ಮಕವಾಗಿ ದೇಶದಲ್ಲಿರುವ ಅಸಮತೋಲನ ಹೋಗಲಾಡಿಸಿ ಎಲ್ಲಾ ರಾಜ್ಯಗಳಲ್ಲೂ ಸದಸ್ಯತ್ವ, ಹೋರಾಟ, ಚಟುವಟಿಕೆಗಳು ಮುಖಂಡತ್ವದಲ್ಲಿ ಮುಂದೆ ಬರುವುದು. ನಮ್ಮದು ಚಟುವಟಿಕೆಗಳಿಂದ ತೃಪ್ತರಾಗುವ ಸಂಘವಲ್ಲ. Committed, Consiousness, capable cader ಗಳಾಗಿ ಬೆಳೆಯಬೇಕು. 2.5 ಲಕ್ಷಕ್ಕೂ ಅಧಿಕ ಸದಸ್ಯತ್ವವನ್ನು ದಾಟಿ ಮುನ್ನಡೆಯುತ್ತಿರುವ ಸಂಘಟನೆ 13 ಲಕ್ಷ ಅಂಗನವಾಡಿ ನೌಕರರು, ಫಲಾನುಭವಿಗಳು, ಸಾರ್ವಜನಿಕರನ್ನು ನಮ್ಮ ಸಂಘ ತಲುಪಬೇಕು. ಬಡವರ ಆಶಾಕಿರಣವಾಗಿ ಅಂಗನವಾಡಿ ಕೇಂದ್ರಗಳನ್ನು ಬೆಳೆಸಬೇಕು. ಸಮುದಾಯದ ಜೊತೆ ಜೀವಂತ ಸಂಬಂಧ ಇಟ್ಟುಕೊಳ್ಳಬೇಕು. ○



ಸಮ್ಮೇಳನವನ್ನುದ್ದೇಶಿಸಿ ಮಾತನಾಡುತ್ತಿರುವ ಸಿಐಟಿಯು ಅ.ಭಾ. ಅಧ್ಯಕ್ಷರಾದ **ಕಾಂ. ಎಂ.ಕೆ.ಪಂಧೆ**

ಸೌಹಾರ್ದ ಸಂಘಟನೆಗಳಿಂದ ಶುಭಾಶಯಗಳು



ಕಾಂ. ವಿಜಯರಾಘವನ್, ಅ.ಭಾ. ಕೃಷಿ ಕೂಲಿಕಾರರ ಸಂಘ



ಕಾಂ. ಕೆ.ಎಸ್.ವಿಮಲಾ, ಅ.ಭಾ. ಜನವಾದಿ ಮಹಿಳಾ ಸಂಘಟನೆ

ಸಮ್ಮೇಳನದಲ್ಲಿ ಪಾಲ್ಗೊಂಡ ಕರ್ನಾಟಕದ ಪ್ರತಿನಿಧಿಗಳು - ಕಾಂ. ನಾಗರತ್ನ;ಬಳ್ಳಾರಿ, ಕಾಂ. ಶಾಂತಮ್ಮ; ಬೆಂಗಳೂರು, ಕಾಂ. ಬಕುಲಾದೇವಿ; ಬೀದರ್.





ಚರ್ಚೆಗಳನ್ನು ಕನ್ನಡಕ್ಕೆ ಅನುವಾದಿಸುತ್ತಿರುವ ಕಾಂ. ಯಮುನಾ ಗಾಂವ್ಕರ್

ಸಮ್ಮೇಳನದ ಯಶಸ್ಸಿಗೆ ಹರಿದುಬಂದ ಸಹಾಯ ಸಹಕಾರ

ಬೆಂಗಳೂರು ನಗರದಲ್ಲಿ ಅಂಗನವಾಡಿ ನೌಕರರ ಅಖಿಲ ಭಾರತ ಸಮ್ಮೇಳನ ಮಾಡ ಬೇಕೆಂದು ಅಖಿಲ ಭಾರತ ಸಮಿತಿ ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಮಿತಿಗೆ ನಿರ್ದೇಶಿಸಿತು. ಅಖಿಲ ಭಾರತ ಸಮ್ಮೇಳನ ಎಂದ ಕೂಡಲೇ ಭಯ ಸಂತೋಷಗಳು ಒಟ್ಟಿಗೆ ಆಗಿ ಈ ಬಹು ದೊಡ್ಡ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಬೇಕು ಎಂಬ ಛಲ ಮಾಡಿತು. ಹಾಗೆಯೇ "ಕೇವಲ ಅಂಗನವಾಡಿ ನೌಕರರು, ಕಡಿಮೆ ಸಂಬಳಕ್ಕೆ ದುಡಿಯುವವರು, ಇದೊಂದು ಅಸಂಘಟಿತ ಕ್ಷೇತ್ರ, ಮಹಿಳೆಯರು" ಎಂಬ ಭಾವನೆಗಳಿರುವ ಜನರ ಮಧ್ಯದಲ್ಲಿ ಸಮ್ಮೇಳನವನ್ನು ಯಶಸ್ವಿಗೊಳಿಸಬೇಕಾದ ಸವಾಲು ಇತ್ತು. ಈ ಸಮ್ಮೇಳನದ ಯಶಸ್ಸು ಕೇವಲ ಊಟ ವಸತಿಗಳ ಸೌಲಭ್ಯ ಒದಗಿಸುವುದಕ್ಕೆ ಮಾತ್ರ ಮೀಸಲಾಗದೇ ನೌಕರರ ಸಮಸೆಯಗಳತ್ತ ಜನರ ಹಾಗೂ ಸರ್ಕಾರದ ಗಮನವನ್ನು ಸೆಳೆದು ಈ ಯೋಜನೆಯ ಪ್ರಾಮುಖ್ಯತೆ ಬಗ್ಗೆ ಪ್ರಚಾರ ಮಾಡುವುದು ಪ್ರಮುಖವಾಗಿತ್ತು.

ಸಮ್ಮೇಳನ ಯಶಸ್ವಿಯಾಗಬೇಕಾದರೆ ಅದರ ಮೂಲ ಸದಸ್ಯರುಗಳನ್ನು ಮತ್ತು ಪ್ರಜಾಸತ್ತಾತ್ಮಕ ಚಳುವಳಿಗಳನ್ನು ಬೆಂಬಲಿಸುವ ಎಲ್ಲಾ ಸಂಘಟನೆಗಳನ್ನು ಮತ್ತು ವ್ಯಕ್ತಿಗಳನ್ನು ಪಾಲ್ಗೊಳಿಸುವುದು ಅಗತ್ಯವಾಗಿತ್ತು.

ಅದರ ಪ್ರಕಾರ ಸಂಘದ ಪದಾಧಿಕಾರಿಗಳ ಸಭೆ, ರಾಜ್ಯಸಮಿತಿ ಮತ್ತು ರಾಜ್ಯ ಮಂಡಳಿ ಸಭೆಗಳನ್ನು ಕ್ರಮಬದ್ಧವಾಗಿ ನಡೆಸಲಾಯಿತು. ಈ ಸಭೆಗಳಿಗೆ ಹಾಜರಾತಿ ಸಂಪೂರ್ಣವಾಗಿತ್ತು. ಅದೇ ರೀತಿ ಸಮ್ಮೇಳನದ ಯಶಸ್ಸಿಗೆ ಮೊದಲೇ ಪ್ರಸ್ತಾಪಿಸಿದಂತೆ ವಿಶಾಲವಾದ ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಇದರ ಗೌರವಾಧ್ಯಕ್ಷರಾಗಿ ಪ್ರಸಿದ್ಧ ಬಂಡಾಯ ಸಾಹಿತಿ, ಇಂತಹ ವಂಚಿತ ಜನರ ಬಗ್ಗೆ ವಿಶೇಷ ಕಾಳಜಿಯನ್ನು ಹೊಂದಿರುವ ಪ್ರೊ.ಬರಗೂರು ರಾಮಚಂದ್ರಪ್ಪ ಮತ್ತು ಸಿಐಟಿಯುವಿನ ಹಿರಿಯ ಸಂಗಾತಿ ಹಾಗೂ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಕಾಂ.ವಿ.ಜೆ.ಕೆ. ನಾಯರ್‌ರವರು ಕಾರ್ಯಾಧ್ಯಕ್ಷರಾಗಿ, ಪ್ರಗತಿಪರ ನಿರ್ದೇಶಕರಾದ ಬಿ.ಸುರೇಶ್, ಹಿರಿಯ ಪತ್ರಕರ್ತೆಯರಾದ ಡಾ.ಆರ್. ಪೂರ್ಣಿಮಾ, ಡಾ.ವಿಜಯಮ್ಮ ಕಾತ್ಯಾಯಿನಿ ಚಾಮರಾಜ್, ಡಾ.ವಸುಂಧರಾ ಭೂಪತಿ, ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಕಾಂ.ಜಿ.ಎನ್.ನಾಗರಾಜ್, ಸಿಪಿಐ(ಎಂ)ನ ಶಾಸಕರಾದ ಕಾಂ.ಜಿ.ವಿ.ಶ್ರೀರಾಮರೆಡ್ಡಿ, ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ನಾಯಕರಾದ ಕಾಂ.ಶಾಂತರಾಜ್, ಇನ್ಶೂರೆನ್ಸ್‌ನ ಕಾರ್ಮಿಕ ನಾಯಕರಾದ ಕಾಂ.ಅಮಾನುಲ್ಲಾಖಾನ್ ಕೆಪಿಆರ್‌ಎಸ್‌ನ ಕಾಂ.ಮಾರುತಿ ಮಾನ್ಪಡೆ, ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ.ಬಿ.ಮಾಧವ, ಸಿಐಟಿಯು ಕಾರ್ಯದರ್ಶಿಗಳಾದ ಕಾಂ.ಎಸ್.ಪ್ರಸನ್ನ ಕುಮಾರ್‌ರವರು ಸಲಹೆಗಾರರಾಗಿ, ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರ ಸಂಘಟನೆಗಳು, ಬಿ.ಇ.ಎಫ್.ಐ, ಕೃಷಿ ಕೂಲಿಕಾರರ ಸಂಘ, ಎಸ್.ಎಫ್.ಐ, ಡಿವೈಎಫ್ಐ, ಜನವಾದಿ ಮಹಿಳಾ ಸಂಘಟನೆ, ವೈದ್ಯರು, ಲಾಯರ್‌ಗಳನ್ನೊಳಗೊಂಡ ಹಾಗೂ ಸಂಘದ ಪದಾಧಿಕಾರಿಗಳನ್ನೊಳಗೊಂಡ ಸ್ವಾಗತ ಸಮಿತಿಯನ್ನು ರಚಿಸಲಾಯಿತು.

ಸ್ವಾಗತ ಸಮಿತಿಯನ್ನು ರಚಿಸುವ ದಿನ ಅತ್ಯಂತ



ಪತ್ರಕರ್ತೆ ಆರ್.ಪೂರ್ಣಿಮಾರವರಿಗೆ ನೆನಪಿನ ಕಾಣಿಕೆ


ವಂದಿಸುತ್ತಿರುವ ಸಂಘಟನೆಯ ಖಜಾಂಚಿ ಕಾಂ. ಸಿಂಧು

ಉತ್ಸಾಹ ಪ್ರೋತ್ಸಾಹಗಳ ನಡುವೆ ಸಮ್ಮೇಳನದ ಪೂರ್ವಭಾವಿ ಕೆಲಸಗಳಿಗೆ ತೀರ್ಮಾನಗಳನ್ನು ಮಾಡಲಾಯಿತು. ಸಮ್ಮೇಳನದ ಯಶಸ್ಸಿಗೆ ಹಲವು ಲಕ್ಷ ರೂಗಳನ್ನು ಖರ್ಚು ಮಾಡಬೇಕಾಗಿತ್ತು. ಹಣವನ್ನು ಸಂಗ್ರಹಿಸಲು ನೌಕರರ ನಡುವೆ ಹೋಗಲು ಯೋಜನೆ ರೂಪಿಸಿ ಸಿಐಟಿಯುಗೆ ಸಂಯೋಜನೆಯಾಗಿರುವ ಅಂಗನವಾಡಿ ನೌಕರರಿಂದ ಒಬ್ಬ ಕಾರ್ಯಕರ್ತೆಗೆ ರೂ.50, ಸಹಾಯಕಿಗೆ ರೂ.25 ಮತ್ತು ಸಮ್ಮೇಳನದ ವಿಚಾರಗಳನ್ನು ಜನರ ಬಳಿ ಕೊಂಡೊಯ್ದು ಅವರಿಂದ ಹಣ ಸಂಗ್ರಹಿಸಲು ಕರೆ ನೀಡಲಾಗಿತ್ತು.

ಹಣದ ಸಂಗ್ರಹ ಅಷ್ಟೇ ಅಲ್ಲದೇ ಪ್ರತಿಯೊಬ್ಬ ಸದಸ್ಯರನ್ನು ಸಮ್ಮೇಳನದ ಕೆಲಸದಲ್ಲಿ ತೊಡಗಿಸುವುದು ಮತ್ತು ಅದು 'ನನ್ನದು' ಎಂಬ ಮನೋಭಾವನೆಯನ್ನು ಬೆಳೆಸುವುದಕ್ಕೆ ಸಹಾಯವಾಗಲು ಪ್ರತಿ ಅಂಗನವಾಡಿ ಕೇಂದ್ರ ಇರುವ ಸ್ಥಳದಲ್ಲಿ ಗೋಡೆ ಬರಹ ಬರೆಯುವುದು, ಬೇಡಿಕೆಗಳಿಗೆ ಸಂಬಂಧಿಸಿ ಚಾರ್ಟ್‌ಗಳನ್ನು ಬರೆಸಲು ಪ್ರೋತ್ಸಾಹಿಸಲಾಯಿತು. ಇದರಂತೆ ಹಲವಾರು ಹಳ್ಳಿಗಳಲ್ಲಿ, ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಗೋಡೆ ಬರಹವನ್ನು ನೌಕರರ ಪರಿಶ್ರಮದಿಂದ ಬರೆಯಲಾಯಿತು. ಹಲವಾರು ನೌಕರರು 50 ರೂ.ಗಳಲ್ಲದೆ 500 ರೂ. ಮತ್ತು 100 ರೂ. ಕೊಟ್ಟಿದ್ದಾರೆ. ಅಂಗನವಾಡಿ ನೌಕರರ ಈ ಸಮ್ಮೇಳನದ ಸಿದ್ಧತೆಗಾಗಿ ಎಲ್ಲಾ ತಾಲೂಕುಗಳಲ್ಲಿ ಸರ್ವ ಸದಸ್ಯರ ಸಭೆ, ತಾಲೂಕು ಸಮಿತಿ ಮತ್ತು ಜಿಲ್ಲಾಸಮಿತಿ ಸಭೆಗಳನ್ನು ನಡೆಸಿ ಸಮ್ಮೇಳನದ ಯಶಸ್ಸಿಗೆ ತಯಾರಿ ನಡೆಸಿದ್ದಾರೆ. ಶಿಡ್ಲಘಟ್ಟ ತಾಲೂಕಿನ ಕಾರ್ಯಕರ್ತೆಯ ಮಗಳು ತನ್ನ ಹುಟ್ಟಿದ ಹಬ್ಬಕ್ಕೆ ಬಟ್ಟೆ ತೆಗೆದುಕೊಳ್ಳಲು ಕಾಣಿಕೆಯಾಗಿ ನೀಡಿದ್ದ 500 ರೂ.ಗಳನ್ನು ಸಮ್ಮೇಳನಕ್ಕೆ ಕಳುಹಿಸಿದ್ದಾಳೆ.


ಕಾಂ. ಎಸ್.ವರಲಕ್ಷ್ಮಿ

ಹುಮ್ನಾಬಾದ್ ತಾಲೂಕಿನ ಒಬ್ಬ ಕಾರ್ಯಕರ್ತೆ 3,200 ರೂ.ಗಳನ್ನು ಕಾಣಿಕೆಯಾಗಿ ನೀಡಿರುವುದು, ಪತ್ರಕರ್ತೆ ಕಾತ್ಯಾಯಿನಿ ಚಾಮರಾಜನ್‌ರವರ ಇಬ್ಬರು ಮಕ್ಕಳು ತಮ್ಮ 'ಪಾಕೇಟ್ ಮನಿ'ಯಿಂದ ತಲಾ 1000 ರೂ.ಗಳನ್ನು ನೀಡಿದ್ದು, ಕಬ್ಬನ್‌ಪಾರ್ಕಿನಲ್ಲಿ ಬಂಟಿಂಗ್ಸ್ ಅಂಟಿಸುತ್ತಿದ್ದಾಗ ದಾರಿಯಲ್ಲಿ ಹೋಗುವವರು ಸ್ವಯಂ ಪ್ರೇರಿತರಾಗಿ ಹಣ ಕೊಟ್ಟಿದ್ದು, ಯಾವ ಸಂಘಟನೆಗಳ ಬಳಿ ಹೋದರೂ ಯಾರೂ ಕೂಡಾ ಅಲ್ಲಗಳೆಯದೇ ವಸ್ತುಗಳ ರೂಪದಲ್ಲಿ, ಹಣದ ರೂಪದಲ್ಲಿ ಸಹಾಯ ಮಾಡಿದ್ದು, ಎಐಬಿಇಎ, ಎಐಬಿಓಸಿ ಸಂಘಟನೆಗಳು ಸ್ವಯಂ ಪ್ರೇರಿತರಾಗಿ ಸಾವಿರಾರು ರೂ.ಗಳ ಹಣ ಕೊಟ್ಟಿದ್ದು, ಮೈಸೂರಿನಲ್ಲಿ ಒಬ್ಬ ಮಹಿಳೆಯನ್ನು ವಿನಂತಿಸಿದ್ದಕ್ಕೆ 5000 ರೂ.ನೀಡಿದ್ದು ಒಂದೆಡೆಯಾದರೆ ಸಂಘಟನೆಯ ನೈಜ ಕಾಳಜಿ ಏನೆಂದು ಗಮನಿಸದೇ ಪೂರ್ವಾಗ್ರಹ ಪೀಡಿತರಾದ ಕೆಲವರು "ಓ ನಿಮ್ಮದು ಕಮ್ಯೂನಿಸ್ಟ್ ಸಂಘಟನೆ, ಸಿಐಟಿಯುನಾ .....ಕೊಡೊಲ್ಲಾ" ಎಂದು ಹೇಳಿದ ಅನುಭವ ಕೂಡಾ ಆಗಿದೆ.

ಉತ್ತರಕನ್ನಡದಿಂದ ಉಪ್ಪಿನಕಾಯಿ, ಉಡುಪಿಯಿಂದ ಗೋಡಂಬಿ, ಹಾಸನದಿಂದ ಕಾಫಿಪುಡಿ, ಆಲೂಗಡ್ಡೆ, ಹೆಸರುಕಾಳು, ರಾಯಚೂರಿನಿಂದ ಬ್ಯಾಡಗಿ ಮೆಣಸಿನಕಾಯಿ, ಗುಲ್ಬರ್ಗಾದಿಂದ ತೊಗರಿಬೇಳೆ, ನಂಜನಗೂಡಿನಿಂದ ರಸಬಾಳೆಹಣ್ಣು, ಬೆಂಗಳೂರಿನವರಿಂದ ತರಕಾರಿ, ಅಂಚೆ ಇಲಾಖೆ ನೌಕರರಿಂದ ಅಕ್ಕಿ, ಹೀಗೆ ವಸ್ತುಗಳ ರೂಪದಲ್ಲಿ ನೌಕರರ ತಮ್ಮ ಜಿಲ್ಲೆಯಲ್ಲಿ ಬೆಳೆಯುವ ವಸ್ತುಗಳನ್ನು ಹೊತ್ತು ತಂದಿದ್ದರು.

ಇನ್ನೊಂದು ಕಡೆಯಲ್ಲಿ ನೂರಾರು ತಾಲೂಕು ಮತ್ತು ಜಿಲ್ಲಾಸಮಿತಿ ಪದಾಧಿಕಾರಿಗಳು ರಾತ್ರಿ ಹಗಲು ಮನೆ, ಹಬ್ಬ ಹರಿದಿನಗಳನ್ನು ಬಿಟ್ಟು ಓಡಾಡಿದ್ದರು.

ಮತ್ತೊಂದೆಡೆ ಅಭೂತಪೂರ್ವ ರ್‍ಯಾಲಿ ಮತ್ತು ಬಹಿರಂಗ ಸಭೆಯಲ್ಲಿ ಪಾಲ್ಗೊಂಡಿದ್ದು 10,000ಕ್ಕಿಂತಲೂ ಹೆಚ್ಚು ಮಹಿಳೆಯರು. ಕೆಂಪು ಸಮವಸ್ತ್ರದೊಟ್ಟಿಗೆ ನೂರಾರು ಮೈಲಿಗಳನ್ನು ನಿದ್ದೆಯಿಲ್ಲದೆ ಪ್ರಯಾಣಿಸಿ, ಬೆಂಗಳೂರಿನಲ್ಲಿ ಉಳಿಯಲು, ಬಟ್ಟೆ ಬದಲಿಸಲು ಸ್ಥಳವಿಲ್ಲದಿದ್ದರೂ ಬೇಸರಿಸದೇ ತಮ್ಮ ಶಕ್ತಿಯನ್ನು ಪ್ರದರ್ಶಿಸಿದ್ದು, ವಯಸ್ಸಾದ ಸಹಾಯಕಿಯರು, ಅಂಗನವಾಡಿ ನೌಕರರು ಕೂಡಾ ಬೆಂಗಳೂರಿನ ಮೆಜೆಸ್ಟಿಕ್‌ನಿಂದ ಹೊರಟ ರ್‍ಯಾಲಿ ಮಲ್ಲೇಶ್ವರಂ ಮೈದಾನದಲ್ಲಿ ಬಹಿರಂಗ ಸಭೆಯಾಗಿ ಮಾರ್ಪಾಟಾದದ್ದು ಮತ್ತು ನೆರೆದ ಜನಸ್ತೋಮ ರಾಜ್ಯದ ಅಂಗನವಾಡಿ ನೌಕರರ ಚಳುವಳಿಯಲ್ಲೇ ಅಪೂರ್ವವಾದುದಾಗಿತ್ತು.

ಸಮ್ಮೇಳನ ನಡೆದ 4 ದಿನಗಳೂ ಕೂಡಾ 60-70 ನೌಕರರು ರಜೆ ಹಾಕಿ ಸ್ವಯಂ ಸೇವಕರಾಗಿ, ಸಿಐಟಿಯು, ರೈತ ಸಂಘ, ಡಿವೈಎಫ್ಐ, ಎಸ್‌ಎಫ್ಐ, ಎಲ್‌ಐಸಿ, ಬ್ಯಾಂಕ್, ಎಫ್‌ಎಂಆರ್‌ಎಐನ ಹಲವಾರು ಸಂಗಾತಿಗಳು ದುಡಿದ ಪರಿಣಾಮದಿಂದ ಸಮ್ಮೇಳನ ಯಶಸ್ವಿಯಾಗಿದೆ. ಎಲ್ಲರಿಗೂ ಈ ಮುಖಾಂತರ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸಲು ಹರ್ಷಿಸುತ್ತೇವೆ.

ನಿರಂತರ ಮಳೆಯ ತೊಂದರೆಯ ನಡುವೆ ಬೆಂಗಳೂರಿನಲ್ಲಿ ಗೋಡೆಬರಹ ನಡೆಸುವುದರಲ್ಲಿ ಎಸ್‌ಎಫ್ಐ, ಡಿವೈಎಫ್ಐ, ಸಿಐಟಿಯು ಸಂಘಟನೆಗಳ ಸಂಗಾತಿಗಳು ತೊಡಗಿಸಿಕೊಂಡಿದ್ದು, ಸಮ್ಮೇಳನದ ಸಭಾಂಗಣ, ಬಹಿರಂಗ ಸಭೆಯ ಮೈದಾನ ನಗರದ ವೃತ್ತಗಳನ್ನು ಅಲಂಕರಿಸಿ ಬ್ಯಾನರ್, ತೋರಣ ಕಟ್ಟುವ ವಿಚಾರದಲ್ಲಿ ಈ ಸಂಗಾತಿಗಳು ಅದರಲ್ಲಿಯೂ ಆಟೋರಿಕ್ಷಾ ಚಾಲಕರ ಸಂಘದ ಸಂಗಾತಿಗಳು ಮತ್ತು ಕಲಾವಿದ ಸಂಗಾತಿಗಳು ತೋರಿಸಿದ ಸಮರ್ಪಣಾ ಮನೋಭಾವವನ್ನು ಎಲ್ಲಿ ನೆನಪಿಸಿಕೊಳ್ಳಬೇಕಿದೆ.

● **ಎಸ್.ವರಲಕ್ಷ್ಮಿ**
ಪ್ರಧಾನ ಕಾರ್ಯದಶಿ, ಕರ್ನಾಟಕ ಘಟಕ

ಛಲ ಬಿಡದ ಹೋರಾಟ ...

ಪುಟ I ರಿಂದ

ತಮ್ಮದೇ ಖರ್ಚಿನಲ್ಲಿ ಕೆಂಪು ಸೀರೆ, ಬಿಳಿ ರವಿಕೆ ತೊಟ್ಟು ಎಡಪಂಥೀಯ ತತ್ವಕ್ಕೆ ಬದ್ಧರಾಗಿ 'ಲಾಲ್ ಸಲಾಮ್' ಹೇಳಲು ಬಂದಿದ್ದ ಇವರೆಲ್ಲರಿಗೆ ಭರವಸೆಯ ಬೆಳಕಾಗಿ ನಿಂತಿದ್ದ ನಾಯಕ ಸಮುದಾಯದ ಶ್ರಮ ಅಷ್ಟಿಷ್ಟಲ್ಲ. ಕೆ.ಹೇಮಲತಾ, ನೀಲಿಮಾ ಮೈತ್ರ, ಜಿ.ಎನ್.ನಾಗರಾಜ್, ವಿ.ಜೆ.ಕೆ. ನಾಯರ್, ಜಿ.ವಿ.ಶ್ರೀರಾಮ ರೆಡ್ಡಿ, ಎಸ್.ವರಲಕ್ಷ್ಮಿ, ವಿಮಲ ಮುಂತಾದ ಅನೇಕ ರಾಷ್ಟ್ರಮಟ್ಟದ ಮತ್ತು ರಾಜ್ಯಮಟ್ಟದ ಈ ನಾಯಕರೆಲ್ಲರೂ ದೇಶದ ಹಿಂದುಳಿದ ವರ್ಗದ ಕಲ್ಯಾಣಕ್ಕಾಗಿ ದುಡಿವ ಅಂಗನವಾಡಿ ಕಾರ್ಯಕರ್ತೆಯರ ಕಲ್ಯಾಣಕ್ಕಾಗಿ ಟೊಂಕಕಟ್ಟಿ ನಿಂತಿರುವವರು. ಹೀಗೆ ಸ್ವಯಂ ಪ್ರೇರಣೆಯಿಂದ ಸ್ವಯಂ ಖರ್ಚಿನಲ್ಲಿ ಒಗ್ಗಟ್ಟಾಗಿ ಬಂದಿಳಿದ ಈ ಕಾರ್ಯಕರ್ತೆಯರ ಸಮಾವೇಶ ಅತ್ಯಂತ ಶಿಸ್ತಿನಿಂದ, ಕ್ರಮಬದ್ಧವಾಗಿ ಹಾಗೂ ಅರ್ಥಪೂರ್ಣವಾಗಿ ನಾಲ್ಕು ದಿನಗಳ ಕಾಲ ನಡೆದದ್ದು ಮಹಿಳಾ ವರ್ಗಕ್ಕೆ ಗೌರವ ಹೆಮ್ಮೆ ತಂದಿದೆ.

ಬರೀ ಘೋಷಣೆಯಲ್ಲ....

ದೇಶದ ಮೂಲೆ ಮೂಲೆಯಿಂದ ಬಂದ ಕಾರ್ಯಕರ್ತೆಯರಿಗೆ ದೇಶದ ಕೋಟ್ಯಾಂತರ ಬಸುರಿ, ಬಾಣಂತಿ ಮತ್ತು ಮಕ್ಕಳ ಯೋಗಕ್ಷೇಮ ಕಾಪಾಡುವಲ್ಲಿ ತಮ್ಮ ಪಾತ್ರವೇನೆಂಬ ಅರಿವಿದೆ. ಹಾಗಾಗಿಯೇ ಆ ಸಮಾವೇಷದಲ್ಲಿ ಹೊಮ್ಮುತ್ತಿದ್ದ

"ಸುಮ್ಮನಿದ್ದರೆ ಸುಲಿಗೆ ತಪ್ಪದು
ದಂಗೆ ಎದ್ದರೆ ಜಯ ನಮ್ಮದು" ಇತ್ಯಾದಿ

ಘೋಷಣೆಗಳು ವಾಸ್ತವ ಹಾಗೂ ಅನುಭವದ ಸೆಲೆಯಲ್ಲಿ ಪುಟಿಯುತ್ತಿತ್ತು.


ಬ್ಯಾನರ್ ತಯಾರಿಕೆಯಲ್ಲಿ ಕಲಾವಿದರು


ತೋರಣ ಕಟ್ಟುತ್ತಿರುವ ಮಹಿಳೆಯರು



ಗೋಡೆ ಬರಹದ ಒಂದು ನೋಟ


ಪ್ರತಿನಿಧಿಗಳಿಗೆ ಆಹಾರ ಪೂರೈಸುತ್ತಿರುವ ಸ್ವಯಂಸೇವಕರು

ನೌಕರರೆಂದು ಪರಿಗಣಿಸಬೇಕೆಂದು ಒತ್ತಾಯಿಸಿ ರಾಷ್ಟ್ರವ್ಯಾಪಿ ಹೋರಾಟ ಮುಂದುವರಿಯಲಿದೆ ಎಂದು ಘೋಷಿಸಿದರು. ರಾಜ್ಯದಲ್ಲಿ 1994ರಲ್ಲಿ ಆರಂಭವಾದ ಸಂಘಟನೆಯು ಇಂದು ಈ ಪ್ರಮಾಣದಲ್ಲಿ ಬೆಳೆದಿರುವುದು ಗಮನಾರ್ಹ ಎಂದೂ ಕೆ.ಹೇಮಲತಾ ಅಭಿನಂದಿಸಿದರು ಮತ್ತು ಮುಂದಿನ ದಿನಗಳಲ್ಲಿ ಬೇಡಿಕೆಗಳ ಈಡೇರಿಕೆಗಾಗಿ ಐಕ್ಯ ಹೋರಾಟ ನಡೆಸಲಾಗುವುದು ಎಂದೂ ಅವರು ತಿಳಿಸಿದರು.

ಜಾಗತೀಕರಣದಿಂದ ಕಾರ್ಮಿಕರ ಮನೆಗಳಲ್ಲಿ ಕಣ್ಣೀರು

ಜಾಗತೀಕರಣದ ನೀತಿಗಳ ಮೂಲಕ ಜನರ ಕಣ್ಣೀರನ್ನು ಒರೆಸುವೆವು ಎಂದು ಸರ್ಕಾರಗಳು ಹೇಳುತ್ತಿವೆ. ಅಧಿಕಾರಸ್ಥರ ಮನೆಗಳಲ್ಲಿ ಕಣ್ಣೀರು ಇಲ್ಲದಿರಬಹುದು. ಆದರೆ ಕಾರ್ಮಿಕರ ಮನೆ ಮನೆಗಳಲ್ಲಿ ಕಣ್ಣೀರಿದೆ ಎಂದು ಸಿಐಟಿಯು ಅಖಿಲ ಭಾರತ ಉಪಾಧ್ಯಕ್ಷರು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ವಿಜೆಕೆ ನಾಯರ್‌ರವರು ಹೇಳಿದರು. ಈ

...ರ್ವ ರ್ಯಾಲಿ

ನೌಕರರು ಕೇಳುವ ನಿವೃತ್ತಿ ವೇತನವಾದರೂ ಎಷ್ಟು? ತಿಂಗಳಿಗೆ 2000 ರೂ. ಅಥವಾ 3000 ರೂ. ಅಲ್ಲ, ಕೇವಲ 400-500 ರೂ. ಮಾತ್ರ ಕೇಳುತ್ತಿರುವುದು. ಇಷ್ಟನ್ನೂ ಮಾಡಲು ಸಿದ್ಧವಿಲ್ಲದ ಸರ್ಕಾರಗಳು ತಾವ ಘೋಷಿಸುವಂತೆ ಬಡತನವನ್ನು ಹೇಗೆ ನಿವಾರಿಸುತ್ತವೆ ಎಂದು ಪ್ರಶ್ನಿಸಿದರು.

ಗೌರವಧನದ ಹೆಸರಿನಲ್ಲಿ ಗುಲಾಮಗಿರಿ

ಮಹತ್ವದ ಐ.ಸಿ.ಡಿ.ಎಸ್. ಯೋಜನೆ ಜಾರಿಯಲ್ಲಿ ಕೇಂದ್ರ-ರಾಜ್ಯ ಸರ್ಕಾರಗಳೆರಡಕ್ಕೂ ಜವಾಬ್ದಾರಿ ಇದ್ದರೂ ಕೇಂದ್ರ ಸರ್ಕಾರಕ್ಕೆ ಪ್ರಧಾನ ಹೊಣೆ. ಪ್ರಸ್ತುತ ಸರ್ಕಾರಗಳು ಗೌರವಧನದ ಹೆಸರಿನಲ್ಲಿ ನೌಕರರನ್ನು ಗುಲಾಮರಂತೆ ನಡೆಸಿಕೊಳ್ಳುತ್ತಿವೆ ಎಂದು ಸಿಪಿಐ(ಎಂ) ಮುಖಂಡರೂ ಬಾಗೇಪಲ್ಲಿ ಕ್ಷೇತ್ರದ ಶಾಸಕರೂ ಆದ ಕಾಂ. ಜಿ.ವಿ.ಶ್ರೀರಾಮರೆಡ್ಡಿಯವರು ಹೇಳಿದರು.

ಗೌರವದ ಹೆಸರಿನಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಸುವುದು ಈ ದೇಶದ ಸಂಸ್ಕೃತಿಯೇ ಆಗಿದೆ. ಮಾತೃದೇವೋಭವ ಎನ್ನುತ್ತಲೆ ಜೀವನದುದ್ದಕ್ಕೂ ಹೆಣ್ಣನ್ನು ಗುಲಾಮಗಿರಿಗೆ ತಳ್ಳುವುದು ಇಲ್ಲಿಯ ಆಳುವ ವರ್ಗದ ಸಂಸ್ಕೃತಿ ಎಂದು ಅವರು ತಿಳಿಸಿದರು.

ಅಂಗನವಾಡಿ ಕಾರ್ಯಕರ್ತೆಯರು ಮಕ್ಕಳ ತಾಯಿ ಇದ್ದಂತೆ. ಆಕೆ ಸಮಾಜದ ಮಕ್ಕಳನ್ನು ಸಲಹುತ್ತಾಳೆ. ಆಕೆ ನಿವೃತ್ತಿಯ ನಂತರ ಬರಿಗೈಲಿ ಮನೆಗೆ ಹೋಗಬೇಕೆಂದರೆ ಎಲ್ಲಿಗೆ ಹೋಗಬೇಕು. ದುಡಿಮೆಗೆ ಕನಿಷ್ಠ ವೇತನವನ್ನು ನಿಗದಿಪಡಿಸಿರುವುದು ಸರ್ಕಾರವೇ. ಆದರೆ ಅದೇ ಸರ್ಕಾರವೇ ಈ ನಿಯಮವನ್ನು ಉಲ್ಲಂಘಿಸುತ್ತಿದೆ. ಈ ಸರ್ಕಾರಗಳು ನಿಯಮ-ವೇತನ ಯಾವುದನ್ನು ಜಾರಿ ಮಾಡುವುದಿಲ್ಲ ಇಂತಹ ನೀತಿಗೆ ಧಿಕ್ಕಾರ ಹೇಳಿ ಸರ್ಕಾರದ ನೀತಿಗಳ ವಿರುದ್ಧ ಚಳುವಳಿಗೆ ಮುಂದಾಗಬೇಕೆಂದು ಶಾಸಕರು ಕರೆ ನೀಡಿದರು.

ಯುಗಯುಗಗಳಿಂದ ನೀವು ತುಳಿದ ಜನಗಳ ಕೊರಳ ದನಿಗಳೋ ನಾವು

ಯುಗ ಯುಗಗಳಿಂದ ನೀವು ತುಳಿದ ಜನಗಳ ಕೊರಳ ದನಿಗಳೋ ನಾವು. ಬರುತಿಹೆವು ನಾವು ಬರುತಿಹೆವು' ಎಂಬ ಕ್ರಾಂತಿಗೀತೆಯ ಸಾಲನ್ನು ನೆನಪಿಸಿದ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ

ಪುಟ 8 ಕ್ಕೆ

ಅಂಗನವಾಡಿ ನೌಕರರಿಗೆ ಬದುಕಲು ಯೋಗ್ಯವಾದ ವೇತನ-ಉದ್ಯೋಗ ಖಾಯಮಾತಿ ಅಗತ್ಯ

— ಎಚ್.ಡಿ.ದೇವೇಗೌಡ



ಅಂಗನವಾಡಿ ನೌಕರರಿಗೆ ಬದುಕಲು ಯೋಗ್ಯವಾದ ವೇತನ ನೀಡುವುದು - ಅವರ ಉದ್ಯೋಗವನ್ನು ಖಾಯಂಗೊಳಿಸುವುದು ಅಗತ್ಯ ಎಂದು ಮಾಜಿ ಪ್ರಧಾನಿಗಳೂ, ಜಾತ್ಯತೀತ ಜನತಾದಳದ ರಾಷ್ಟ್ರೀಯ ಅಧ್ಯಕ್ಷರೂ ಆದ ಶ್ರೀ ಎಚ್.ಡಿ.ದೇವೇಗೌಡರವರು ಪ್ರತಿಪಾದಿಸಿದರು. ಅವರು 9.11.2005 ಸಂಜೆ ಕಾಂ. ಸುಶೀಲಗೋಪಾಲನ್ ನಗರದ, ಟೌನ್‌ಹಾಲ್(ಬೆಂಗಳೂರು)ನಲ್ಲಿ ನಡೆದ 'ಐಸಿಡಿಎಸ್ ಮತ್ತು ಸರ್ಕಾರದ ಪಾತ್ರ' ಈ ವಿಷಯದ ರಾಷ್ಟ್ರಮಟ್ಟದ ವಿಚಾರಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಬಹಳಷ್ಟು ವರ್ಷಗಳಿಂದ ಅಭದ್ರ ಸ್ಥಿತಿಯಲ್ಲಿರುವ ಅಂಗನವಾಡಿ ನೌಕರರ ಖಾಯಮಾತಿ ಬಗ್ಗೆ ತನ್ನ ಸಂಪೂರ್ಣ ಸಹಮತವಿದೆ. ಇವರನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರದ ಇಲಾಖೆಯ ನೌಕರರೆಂದು ಪರಿಗಣಿಸಬೇಕೆಂದು ಹಾಗೂ ಬದುಕಲು ಯೋಗ್ಯ ಕೂಲಿ ನೀಡಬೇಕೆಂದು ಈ ಸಂಬಂಧ ತಾವು ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರಲ್ಲಿ ಚರ್ಚಿಸುವುದಾಗಿ ತಿಳಿಸಿದರು. ಒಂದೆಡೆ ಕಾರ್ಪೊರೇಟ್ ಕಚೇರಿಗಳಲ್ಲಿ ಕೈತುಂಬಾ ಸಂಬಳ ತೆಗೆದುಕೊಳ್ಳುತ್ತಿದ್ದರೆ ಇನ್ನೊಂದೆಡೆ ಸ್ವಚ್ಛತಾ ಕೆಲಸ ಮಾಡುವ ಕಾರ್ಮಿಕರಿಗೆ ಅತ್ಯಂತ ನಿಕೃಷ್ಟ ಸಂಬಳ ನೀಡಲಾಗುತ್ತಿದೆಯಲ್ಲದೆ ಗುತ್ತಿಗೆಯಾಧಾರದಲ್ಲಿ ನೇಮಿಸಿಕೊಳ್ಳಲಾಗುತ್ತಿದೆ. ಇದೆಂತಹ ನ್ಯಾಯವೆಂದು ಗೌಡರು ಬೇಸರದಿಂದ ಪ್ರಶ್ನಿಸಿದರು.


ವಿಚಾರಸಂಕಿರಣದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳಾದ ಶ್ರೀ ಎನ್.ಧರಂಸಿಂಗ್‌ರವರು 100 ರೂ.ಗಳಷ್ಟು ಗೌರವಧನ ಹೆಚ್ಚಳಕ್ಕೆ ಶಿಫಾರಸು ಮಾಡಿರುವುದಾಗಿ ತಿಳಿಸಿದರು. ಅಂಗನವಾಡಿ ನೌಕರರ ಸಮಸ್ಯೆಗಳನ್ನು ತಿಳಿಯುವಲ್ಲಿ ಪ್ರಯತ್ನ ಮಾಡಲಾಗಿದೆ. ಸಮ್ಮೇಳನದಲ್ಲಿ ಕೈಗೊಂಡಿರುವ ನಿರ್ಣಯಗಳ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆ ಎಂದು ತಿಳಿಸಿದರು.

ಆರೋಗ್ಯಕ್ಕೆ ಜಿಡಿಪಿಯ ಕನಿಷ್ಟ ಶೇ 2-3 ವಿನಿಯೋಗಿಸುವುದು ಅಗತ್ಯ

- ಕಾಂ. ಪ್ರಕಾಶ್ ಕಾರಟ್

ಜಾಗತೀಕರಣದ ನಂತರದ ಈ ದಿನಗಳಲ್ಲಿ ಸರ್ಕಾರಗಳು ಕೇವಲ ಶೇ. 0.9 ರಷ್ಟು ಜಿಡಿಪಿ ಮಾತ್ರ ಸಾರ್ವಜನಿಕ ಆರೋಗ್ಯಕ್ಕೆ ವಿನಿಯೋಗಿಸುತ್ತಿವೆ. ದಿನೇದಿನೇ ಇದರ ವೆಚ್ಚವನ್ನು ಕಡಿತಗೊಳಿಸಲಾಗುತ್ತಿದೆ. ಇದು ನಾಚಿಕೆಯ ವಿಚಾರ. ಸಾರ್ವಜನಿಕ ಆರೋಗ್ಯ ಹಾಗೂ ದೇಶದ ಮುಂದಿನ ಭಾವಿ ಪ್ರಜೆಗಳಾದ 6 ವರ್ಷದೊಳಗಿನ ಮಕ್ಕಳ ಪಾಲನೆ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾಗಿದೆ. ಆದರೆ ಸರ್ಕಾರಗಳು ಈ ಹೊಣೆಗಾರಿಕೆಯಿಂದ ನುಣುಚಿಕೊಳ್ಳುತ್ತಿವೆ. ಇದು ಬದಲಾಗಬೇಕಾಗಿದೆ. ಸರ್ಕಾರಗಳು ಮಕ್ಕಳ ಪಾಲನೆಯಲ್ಲಿ ಐಸಿಡಿಎಸ್ ಯೋಜನೆಯನ್ನು ವಿಸ್ತರಿಸಿ ಸಾರ್ವತ್ರೀಕರಣಗೊಳಿಸಬೇಕಾಗಿದೆ. ವಾರ್ಷಿಕ ಆಯವ್ಯಯದ ಕನಿಷ್ಟ ಶೇ. 2 - 3 ರಷ್ಟು ಮಕ್ಕಳ ಆರೋಗ್ಯಪಾಲನೆಗೆ ಮೀಸಲಿಡಬೇಕೆಂದು, ಇದಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನು ತೆರಿಗೆ ಸಂಗ್ರಹ ಜಿಡಿಪಿಯಿಂದ ಕ್ರೋಢೀಕರಿಸಬೇಕೆಂದು ಸಿಪಿಐ(ಎಂ) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕಾಂ. ಪ್ರಕಾಶ್ ಕಾರಟ್ ಅಭಿಪ್ರಾಯ ಪಟ್ಟರು.

ಈ ಸಂಬಂಧ ನಮ್ಮಲ್ಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆ ಇದೆ ಎಂದು ಅವರು ವಿವರಿಸಿದರು. ಸಾಮಾಜಿಕ ಪರಿವರ್ತನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಅಂಗನವಾಡಿ ನೌಕರರನ್ನು ಸಾಮಾಜಿಕ ನ್ಯಾಯದಿಂದ ವಂಚಿಸಲಾಗುತ್ತಿದೆ. ಅವರಿಗೆ ಅತಿಕಡಿಮೆ ಸಂಬಳ ಹಾಗೂ ಖಾಯಂಗೊಳಿಸದೆ ಅನ್ಯಾಯ ಎಸಗಲಾಗುತ್ತಿದೆಯೆಂದರು.



ವಿಚಾರಸಂಕಿರಣದಲ್ಲಿ ಮಾತನಾಡಿದ ಆರ್ಥಿಕ ತಜ್ಞೆ ಪ್ರೊ. ಜಯತಿ ಘೋಷ್‌ರವರು ಭವಿಷ್ಯದ ದೃಷ್ಟಿಯಿಂದಾಗಿ ಪೌಷ್ಟಿಕ ಆಹಾರ, ತಾಯಿ ಮಗುವಿನ ಆರೋಗ್ಯಗಳ ಬಗ್ಗೆ ಗಮನ ನೀಡುವುದು ಅಗತ್ಯವೆಂದರು. ಈ ದೃಷ್ಟಿಕೋನದಲ್ಲಿ ಐಸಿಡಿಎಸ್ ಯೋಜನೆ ಅತಿಕಡಿಮೆ ವೆಚ್ಚದ ಹಾಗೂ ವಿಶಾಲವಾಗಿ ಹರಡಿದ ಯೋಜನೆ, ಪೂರ್ಣಾವಧಿ ಕೆಲಸ ನಿರ್ವಹಿಸುತ್ತಿರುವ ಅಂಗನವಾಡಿ ನೌಕರರನ್ನು ಈ ಕೂಡಲೇ ಸರ್ಕಾರ ಖಾಯಮಾತಿಗೊಳಿಸಬೇಕೆಂದು ಇದಕ್ಕೆ ತಗಲುವ ವೆಚ್ಚ 16,500 ಕೋಟಿಯಷ್ಟು ಆಗಲಿದ್ದು ಪ್ರಸಕ್ತ ಕೇಂದ್ರ ಸರ್ಕಾರವು ಈ ಮೊತ್ತಕ್ಕಿಂತ ಹೆಚ್ಚಿನ ಹಣವನ್ನು ಸೇನೆಯ ಆಧುನೀಕರಣದ ಬಜೆಟ್ ಹೆಚ್ಚಳವಾಗಿ ನೀಡಿದೆ ಎಂದು ನುಡಿದರು. ಮಧ್ಯಾಹ್ನದ ಊಟದ ಯೋಜನೆಯ ಸಾರ್ವತ್ರೀಕರಣ, ಗ್ರಾಮೀಣ ಉದ್ಯೋಗ ಖಾತರೀ ಯೋಜನೆ, ಐಸಿಡಿಎಸ್ ಸಾರ್ವತ್ರೀಕರಣಗೊಳಿಸಬೇಕೆಂದು ಒತ್ತಾಯಿಸಿದರು.




ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯಮಂತ್ರಿಗಳಾದ ಶ್ರೀಮತಿ ಸುಬ್ಬಲಕ್ಷ್ಮಿ ಜಗದೀಶನ್ ಮಾತನಾಡುತ್ತಾ ಯುಪಿಎ ಸರ್ಕಾರದ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಐಸಿಡಿಎಸ್‌ನ್ನು ವಿಸ್ತರಿಸುವ ಮತ್ತು ಬಲಪಡಿಸುವ ಅಂಶಇದೆ. ಅದನ್ನು ಜಾರಿ ಮಾಡಲು ತಮ್ಮ ಸರ್ಕಾರ ಪ್ರಯತ್ನಿಸುತ್ತದೆ ಎಂದರು.

ರಾಜ್ಯದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀಮತಿ ಭಾಗೀರತಿ ಮರುಳಸಿದ್ದನಗೌಡರವರು ಮಾತನಾಡಿ ಅಂಗನವಾಡಿ ಕಾರ್ಯಕರ್ತೆಯರ, ಸಹಾಯಕರ ಸಮಸ್ಯೆಗಳು - ಅವರ ಮೇಲಿರುವ ಕೆಲಸಗಳ ಹೊರೆಯ ಬಗೆಗೆ ತಮಗೆ ಮನವರಿಕೆಯಾಗಿದ್ದು, ಅದನ್ನು ಕಡಿತ ಮಾಡುವ ದೃಷ್ಟಿಯಿಂದ ಬೇರೆ ಬೇರೆ ಇಲಾಖೆಗಳು ಅಂಗನವಾಡಿ ನೌಕರರನ್ನು ತಮ್ಮ ಕೆಲಸಕ್ಕೆ ಬಳಸಬಾರದೆಂದು, ಹಾಗೇನಾದರೂ ಅಗತ್ಯವಾದಲ್ಲಿ ಸರ್ಕಾರದಿಂದ ಪೂರ್ವಾನುಮತಿ ಪಡೆಯಬೇಕೆಂದು ಜಿಲ್ಲಾ ಪಂಚಾಯತ್‌ಗಳಿಗೆ ಆದೇಶ ನೀಡಿರುವುದಾಗಿಯೂ ತಿಳಿಸಿದರು. ಅಂಗನವಾಡಿ ಕಾರ್ಯಕರ್ತೆಯರು - ಸಹಾಯಕಿಯರ ಸಮಸ್ಯೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಅವರು ಭರವಸೆ ನೀಡಿದರು.

ಒಟ್ಟಾರೆಯಾಗಿ ವಿಚಾರಸಂಕಿರಣದಲ್ಲಿ ಮಾತನಾಡಿದ - ಪಾಲ್ಗೊಂಡ ಪ್ರತಿಯೊಬ್ಬರೂ ಸಹ ಅಂಗನವಾಡಿ ನೌಕರರ ಸಮಸ್ಯೆಗಳು ಬಹಳ ಗಂಭೀರವಾಗಿದೆ ಎಂದು ಮತ್ತು ಆ ಸಮಸ್ಯೆಗಳು ಪರಿಹಾರಕ್ಕೆ ತುರ್ತುಗಮನ ಅಗತ್ಯ ಎಂಬ ವಿಚಾರದ ಬಗೆಗೆ ತಮ್ಮ ಸಹಮತ ಸೂಚಿಸಿದರು.

ಸಂಘಟನೆಯ ಅಖಿಲ ಭಾರತ ಅಧ್ಯಕ್ಷರಾದ ಕಾಂ. ನೀಲಿಮಾ ಮೈತ್ರಾ ಅಧ್ಯಕ್ಷತೆ ವಹಿಸಿದ್ದ ಈ ವಿಚಾರಸಂಕಿರಣದ ಆರಂಭದಲ್ಲಿ ಪ್ರಸ್ತಾವನೆಯ ಮಾತುಗಳನ್ನಾಡಿದ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಕೆ.ಹೇಮಲತಾರವರು ಸಮುದಾಯ ಅಭಿವೃದ್ಧಿ ಕೇಂದ್ರಗಳಾಗಿ ಕೇಂದ್ರ ಸರ್ಕಾರದ ಐಸಿಡಿಎಸ್ ಯೋಜನೆಯಲ್ಲಿ ದುಡಿಯುವ ಕಾರ್ಯಕರ್ತೆಯರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡಕ್ಕೂ ಬಹಳಷ್ಟು ಪ್ರಯೋಜನಗಳಿವೆ. ಐಸಿಡಿಎಸ್ ಯೋಜನೆಗಾಗಿ ಮಾತ್ರವಲ್ಲ ಇವರನ್ನು ಹಲವಾರು ಇಲಾಖೆಗಳ ಕಾರ್ಯಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ. ಸರ್ಕಾರದ ವಿವಿಧ ಯೋಜನೆಗಳನ್ನು ಜಾರಿ ಮಾಡಲು ವಿವಿಧ ಇಲಾಖೆಗಳಿವೆ. ಆದರೆ ಐಸಿಡಿಎಸ್ ಯೋಜನೆಗೆ ಒಂದು ಇಲಾಖೆ ಎಂಬುದಿಲ್ಲ. ಕಳೆದ ಸುಮಾರು 30 ವರ್ಷಗಳಿಂದ ಉದ್ಯೋಗ ಭದ್ರತೆ ಇಲ್ಲದೆ, ಸರಿಯಾದ ವೇತನ ಇಲ್ಲದೆ, ನಿವೃತ್ತಿಯಿಲ್ಲದೆ ದುಡಿಯುತ್ತಿದ್ದಾರೆ. ಈ ಎಲ್ಲಾ ಸಮಸ್ಯೆಗಳಿಗೆ ಈ ವಿಚಾರಸಂಕಿರಣದಲ್ಲಿ ಪರಿಹಾರದ ಉತ್ತರವನ್ನು ಕಂಡುಕೊಳ್ಳಬೇಕಿದೆ ಎಂದರು. ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷೆ ಕಾಂ. ಕೆ.ಎಸ್.ವಿಮಲ ಕಾರ್ಯಕ್ರಮ ನಿರೂಪಿಸಿದರು. ಸಮ್ಮೇಳನದ ಅಂಗವಾಗಿ ಹೊರತರಲಾದ 'ಅಂಗನವಾಡಿ ಅಕ್ಕ' ಸ್ಮರಣ ಸಂಚಿಕೆಯನ್ನು ಶ್ರೀಮತಿ ಭಾಗೀರತಿ ಮರುಳಸಿದ್ದನಗೌಡ ಬಿಡುಗಡೆ ಮಾಡಿದರು.





..............ರ್‍ಯಾಲಿ - ಬಹಿರಂಗ ಸಭೆ

ಪುಟ 7 ರಿಂದ

ಕಾಂ. ಜಿ.ಎನ್.ನಾಗರಾಜ್‌ರವರು ಈ ಬಹಿರಂಗ ಸಭೆಯಲ್ಲಿ ಅಂಗನವಾಡಿ ನೌಕರರ ಚಳುವಳಿಯನ್ನು ಬೆಂಬಲಿಸಿ ಸಿಪಿಐ(ಎಂ) ಪಕ್ಷದ ಪರವಾಗಿ ಮಾತನಾಡಿದರು.

ಹಲವು ಬೇಡಿಕೆಗಳ ವಿಚಾರದಲ್ಲಿ ರಾಜ್ಯ ಸರ್ಕಾರದ ಧೋರಣೆಗಳ ವಿರುದ್ಧ ಸೆಣಸಿ ಅದನ್ನು ಮಣಿಸಿದ್ದೀರಿ. ಸೆಪ್ಟೆಂಬರ್ 29ರ ಮುಷ್ಕರದಲ್ಲಿ ದೊಡ್ಡ ಪಾತ್ರ ವಹಿಸಿದ್ದೀರಿ. ಮಕ್ಕಳ ಯೋಗಕ್ಷೇಮ ಮಾತ್ರವಲ್ಲ ಸ್ತ್ರೀ ಶಕ್ತಿ ಸಂಘಟನೆ, ಇತ್ಯಾದಿಗಳಿಗಾಗಿ ದುಡಿಯುತ್ತಿದ್ದೀರಿ. ಇದೀಗ ಉಳ್ಳವರಿಗಾಗಿ ಎಲ್.ಕೆ.ಜಿ.- ಯು.ಕೆ.ಜಿ.ಗಳಂತಹ ಇಂಗ್ಲೀಷ್ ಭಾಷೆಯ ಕಿಂಡರ್‌ಗಾರ್ಡನ್‌ಗಳು ಕಾಟ ಪೂರ್ವ ಪ್ರಾಥಮಿಕ ಶಾಲೆಗಳ ಹಂತದಲ್ಲಿ ದಿನೇ ದಿನೇ ಹಬ್ಬುತ್ತಿದೆ. ಈ ಹಿನ್ನೆಲೆಯಲ್ಲಿ ಅಂಗನವಾಡಿಗಳು ಬಲವರ್ಧನೆಗೊಂಡು ಸನ್ನದ್ಧಗೊಂಡು ಈ ಎಲ್.ಕೆ.ಜಿ. - ಯು.ಕೆ.ಜಿ.ಗಳ ಸವಾಲನ್ನು ಎದುರಿಸಿ ಕನ್ನಡವನ್ನು ಜನರನ್ನು ಹಿತವನ್ನು ಕಾಪಾಡುವಂತಾಗಬೇಕು. ಅಂಗನವಾಡಿ ನೌಕರರ ಚಳುವಳಿಗೆ ಸಿಪಿಐ(ಎಂ) ಪಕ್ಷವು ತನ್ನ ಪೂರ್ಣವಾದ ಬೆಂಬಲವನ್ನು ನೀಡುತ್ತದೆ ಎಂದು ಘೋಷಿಸಿದ ಅವರು ಸಿಪಿಐ(ಎಂ)ನ 44 ಸಂಸದರೂ ಚಳುವಳಿಯ ಪರವಾಗಿ ದುಡಿಯುತ್ತಾರೆ ಎಂದು ತಿಳಿಸಿದರು.

ಮಹಿಳಾ ಮೀಸಲಾತಿಗಾಗಿ ಚಳುವಳಿ

ಅಂಗನವಾಡಿ ಮಹಿಳೆಯರ ಸಮಸ್ಯೆಗಳನ್ನು ಸಮರ್ಥವಾಗಿ ಶಾಸನ ಸಭೆಗಳಲ್ಲಿ ಪ್ರತಿನಿಧಿಸಿ ಪರಿಹಾರ ಒದಗಿಸಲು ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ದೊರೆಯುವುದು ಸಹ ಅವಶ್ಯವಾಗಿದೆ. ಈ ಹಿನ್ನೆಲೆಯಲ್ಲಿ ಶಾಸನ ಸಭೆಗಳಲ್ಲಿ ಮೂರನೇ ಒಂದು ಭಾಗವನ್ನು ಮಹಿಳೆಯರಿಗೆ ನೀಡಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ. ಸಮಾಜವಾದಿ ಪಕ್ಷ - ರಾಷ್ಟ್ರೀಯ ಜನತಾ ದಳ ಮುಂತಾದವು ಈ ಮಹಿಳಾ ಮೀಸಲಾತಿ ನೀತಿಯನ್ನು ವಿರೋಧಿಸುತ್ತಿವೆ. ಬಿಜೆಪಿ ಪಕ್ಷ ಹಿಂದೆ ಮೀಸಲಾತಿಗೆ ಒಪ್ಪಿಗೆ ನೀಡಿತ್ತು. ಆದರೆ ಈಗ ರಾಜಕೀಯ ಪಕ್ಷಗಳು ತಾವೇ ತಮ್ಮ ಅಭ್ಯರ್ಥಿಗಳಲ್ಲಿ ಮೀಸಲಾತಿ ನೀಡಲಿ ಎನ್ನುತ್ತ ಪಲ್ಟಿ ಹೊಡೆದಿದೆ. ಇದರ ಹಿಂದಿನ ಮೋಸವನ್ನು ಅರ್ಥ ಮಾಡಿಕೊಳ್ಳಬೇಕು. ಬಿಜೆಪಿ ಹೇಳುವಂತೆ ಏನಾದರೂ ಆದಲ್ಲಿ ರಾಜಕೀಯ ಪಕ್ಷಗಳು ತಾವು ಗೆಲ್ಲುವ ಕ್ಷೇತ್ರಗಳಲ್ಲಿ ಪುರುಷರಿಗೂ ಸೋಲುವ ಕ್ಷೇತ್ರಗಳಲ್ಲಿ ಮಹಿಳೆಯರಿಗೂ ಸೀಟು ನೀಡುತ್ತವೆ. ಆದರೆ ಸಿಪಿಐ(ಎಂ) ಪಕ್ಷವು ಶಾಸನ ಸಭೆಗಳಲ್ಲಿ ಶೇ.33 ಮಹಿಳಾ ಮೀಸಲಾತಿ ನೀತಿಗೆ ಬದ್ಧವಾಗಿದೆ. ಹಾಗೂ ನವೆಂಬರ್ 21ರಂದು ರಾಷ್ಟ್ರವ್ಯಾಪಿ ರಾಜ್ಯವ್ಯಾಪ್ತಿಯಾಗಿ ಈ ಸಂಬಂಧ ಚಳುವಳಿ ನಡೆಸಲಿದೆ ಎಂದು ಅವರು ಘೋಷಿಸಿದರು. ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿಯೇ ಈ ಮಸೂದೆ ಮಂಡಿಸಬೇಕೆಂದು ಪಕ್ಷ ಆಗ್ರಹಿಸಿದೆಯೆಂದು ಅವರು ಹೇಳಿದರು.



ಕಾಂ. ಯಮುನಾ ಗಾಂವ್ಕರ್ ಬಹಿರಂಗ ಸಭೆಯಲ್ಲಿ ನಿರೂಪಣೆಯ ಜವಾಬ್ದಾರಿ ನಿರ್ವಹಿಸಿದ್ದರು. ರಾಜ್ಯ ಅಧ್ಯಕ್ಷೆ ಕಾಂ. ಶಾಂತಾಘಂಟಿಯವರು ಸ್ವಾಗತಿಸಿದರು. ಸಂಘಟನೆಯ ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ಕಾಂ. ಲೀಲಾವತಿಯವರು ವಂದಿಸಿದರು.

ಈ ಬಹಿರಂಗ ಸಭೆಯಲ್ಲಿ ಸಿಐಟಿಯುನ ಅಖಿಲ ಭಾರತ ಉಪಾಧ್ಯಕ್ಷರಾದ ಕಾಂ. ಕನ್ಯ ಬ್ಯಾನರ್ಜಿ ಅಂಗನವಾಡಿ ನೌಕರರ ಚಳುವಳಿಯ ಛಾಯಾ ಚಿತ್ರಗಳನ್ನೊಳಗೊಂಡ ಕ್ಯಾಲೆಂಡರ್ ಹಾಗೂ ಡೈರಿಗಳನ್ನು ಬಿಡುಗಡೆ ಮಾಡಿದರು.

○

ಅಂಗನವಾಡಿ ಸಂಘಟನೆಯ ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಕಾಂ. ಎಸ್.ವರಲಕ್ಷ್ಮಿಯವರು ಸಂಘಟನೆಯ ಕೇಂದ್ರ ಕಾರ್ಯಕಾರಿ ಸಮಿತಿಯ ಕಾರ್ಯದರ್ಶಿಯಾಗಿ ಹಾಗೂ ರಾಜ್ಯ ಅಧ್ಯಕ್ಷರಾದ ಶಾಂತ ಎಸ್.ಘಂಟಿ ಮತ್ತು ಕಾರ್ಯದರ್ಶಿ ಕಾಂ.ಯಮುನಾ ಗಾಂವ್ಕರ್, ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.


ಎಸ್.ವರಲಕ್ಷ್ಮಿ


ಶಾಂತ ಎಸ್.ಘಂಟಿ


ಯಮುನಾ ಗಾಂವ್ಕರ್


ನಿರ್ಣಯಗಳು

ಸಮ್ಮೇಳನವು ಐಸಿಡಿಎಸ್ ಯೋಜನೆಯ ಬಲವರ್ಧನೆ ಸೇರಿದಂತೆ ದಲಿತರು, ಮಹಿಳೆಯರು, ಅಸಂಘಟಿತ ಕಾರ್ಮಿಕರ ಬದುಕು ಇತ್ಯಾದಿ ವಿವಿಧ ಪ್ರಶ್ನೆಗಳ ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯವನ್ನು ಕೈಗೊಂಡಿದೆ.

1. ಐಸಿಡಿಎಸ್ ನ್ನು ಸಾರ್ವತ್ರೀಕರಣಗೊಳಿಸಿ ಬಲಗೊಳಿಸುವ ಕುರಿತು ಅದರ ಭಾಗವಾಗಿ, ಈಗ 'ಯೋಜನೆ'ಯಾಗಿರುವುದನ್ನು 'ಇಲಾಖೆ'ಯಾಗಿ ಪರಿವರ್ತಿಸುವುದು ಮತ್ತು ಅಂಗನವಾಡಿ ಕೇಂದ್ರಗಳು ಸಮಾಜ ಸುಧಾರಣೆಯ, ಅಸ್ಪೃಶ್ಯತೆಯ ವಿರುದ್ಧ, ಬಾಲ ಕಾರ್ಮಿಕ ಪದ್ಧತಿ ವಿರುದ್ಧ ಕೆಲಸ ಮಾಡುವ ಒಟ್ಟಾರೆ ಸಮುದಾಯ ಅಭಿವೃದ್ಧಿ ಕೇಂದ್ರಗಳಾಗಿ ಅಭಿವೃದ್ಧಿಗೊಳಿಸುವುದು. 1ನೇ ತರಗತಿಗೆ ಸೇರುವ ಮಕ್ಕಳಿಗೆ ಅಂಗನವಾಡಿಗಳಿಂದ ಕಡ್ಡಾಯವಾಗಿ ವರ್ಗಾವಣೆ ಪ್ರಮಾಣ ಪತ್ರ ಕೊಡುವಂತೆ ಮಾಡುವುದು ಹಾಗೂ ಅಂಗನವಾಡಿ ನೌಕರರನ್ನು 3 ಮತ್ತು 4ನೇ ದರ್ಜೆಯ ಖಾಯಂ ನೌಕರರನ್ನಾಗಿಸುವುದು.
2. ಮಹಿಳಾ ಮೀಸಲಾತಿ ಮಸೂದೆ ಶೀಘ್ರ ಜಾರಿಗೆ ಒತ್ತಾಯಿಸಿ
3. ಲೈಂಗಿಕ ಕಿರುಕುಳದ ವಿರುದ್ಧ ಶಾಸನ ರೂಪಿಸುವುದು.
4. ಕೃಷಿ ಕೂಲಿಕಾರರಿಗೆ ಸಮಗ್ರ ಶಾಸನಕ್ಕೆ ಒತ್ತಾಯ
5. ವಿವಿಧ ಕ್ಷೇತ್ರಗಳಲ್ಲಿ ದುಡಿಯುವ ಮಹಿಳೆಯರ ಬೇಡಿಕೆ ಈಡೇರಿಸುವುದು.
6. ಸಾಮಾಜಿಕವಾಗಿ ಹಿಂದುಳಿದವರು ಹಾಗೂ ದಲಿತರ ಮೇಲಿನ ಅನ್ಯಾಯ ವಿರೋಧಿಸಿ
7. ನಿರುದ್ಯೋಗದ ವಿರುದ್ಧ ಉದ್ಯೋಗವಕಾಶಕ್ಕಾಗಿ
8. ಆಹಾರ ಭದ್ರತೆ ಕುರಿತು
9. ಅಸಂಘಟಿತ ಕ್ಷೇತ್ರದ ಕೆಲಸಗಾರರ ಕುರಿತು
10. ದುಡಿಯುವ ವರ್ಗದ ಹಕ್ಕುಗಳ ಮೇಲಿನ ದಾಳಿಯನ್ನು ವಿರೋಧಿಸಿ

ನೂತನ ಪದಾಧಿಕಾರಿಗಳು

ಅಧ್ಯಕ್ಷರು : ಕಾಂ. ನೀಲಿಮಾ ಮೈತ್ರಾ
ಕಾರ್ಯಾಧ್ಯಕ್ಷರು: ಕಾಂ. ಭವತೋಷ್ ರಾಯ್
ಪ್ರಧಾನ ಕಾರ್ಯದರ್ಶಿ: ಕಾಂ. ಹೇಮಲತಾ
ಖಜಾಂಚಿ : ಕಾಂ. ಸಿಂಧು
ಉಪಾಧ್ಯಕ್ಷರು : ಮಹಾರಾಣಿ, ಕೂಣಿ, ಬಿ.ಲಲಿತಮ್ಮ, ಕೌಜಲರಾಣಿ, ಶುಭಾ ಶಮೀಮ್
ಕಾರ್ಯದರ್ಶಿಗಳು: ರತ್ನದತ್ತ, ವಿ.ಸಿ.ಕಾತ್ಯಾಯಿನಿ, ಪಿ.ರೋಜಾ, ತಮಿಳರಸಿ, ಹರಗೋವಿಂದ, ಸರೋಜಾನಂದ, ಕುಂಜದೇಖಾ, ವರಲಕ್ಷ್ಮಿ ಎಸ್.


ಕೆ.ಹೇಮಲತಾ


ನೀಲಿಮಾ ಮೈತ್ರಾ

ಸಂಘಟನಾತ್ಮಕವಾದ ತೀರ್ಮಾನಗಳು

ಅಖಿಲ ಭಾರತ ಹಾಗೂ ರಾಜ್ಯ ಕೇಂದ್ರ ಬಲಗೊಳಿಸುವದು, ಕಾರ್ಯಕರ್ತರಿಗೆ ಅಧ್ಯಯನ ಶಿಬಿರ, ಕೆಲಸದ ಕ್ರೂಢೀಕರಣಕ್ಕೆ ಕಛೇರಿ ಹೊಂದುವುದು, ಸಹಾಯಕಿಯರ ಪ್ರತ್ಯೇಕ ಸಮಸ್ಯೆ ವಿರುದ್ಧ ಹೋರಾಟ ರೂಪಿಸಿ, ಮುಖಂಡತ್ವಕ್ಕೆ ತರುವುದು, ಸಮಿತಿಗಳನ್ನು ಇನ್ನಷ್ಟು ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಗೆ ಹಚ್ಚುವುದು ಮತ್ತು ಸದಸ್ಯತ್ವವನ್ನು ದುಪ್ಪಟ್ಟುಗೊಳಿಸುವ ಬಗ್ಗೆ ತೀರ್ಮಾನಿಸಲಾಗಿದೆ.

ಮುಂದಿನ ಹೋರಾಟ ಕಾರ್ಯಕ್ರಮಗಳು

ಅಂಗನವಾಡಿ ನೌಕರರ ಸಮಗ್ರ ಸಮಸ್ಯೆಗಳನ್ನು ಚರ್ಚಿಸಿದ ಸಮ್ಮೇಳನವು ಕೆಲವು ತುರ್ತು ಪ್ರಶ್ನೆಗಳ ಆಧಾರದಲ್ಲಿ ಈ ಕೆಳಕಂಡಂತೆ ಚಳುವಳಿ -ಹೋರಾಟ ರೂಪಿಸಿದೆ. ಐಸಿಡಿಎಸ್ ನ ಸಾರ್ವತ್ರೀಕರಣಕ್ಕೆ ಆಗ್ರಹಿಸಿ, ರಾಷ್ಟ್ರ-ರಾಜ್ಯಮಟ್ಟಗಳಲ್ಲಿ ರೈತ-ಕೂಲಿಕಾರ-ಮಹಿಳಾ ಸಂಘಟನೆ ಹಾಗೂ ಫಲಾನುಭವಿಗಳೊಂದಿಗೆ ಸಭೆ ನಡೆಸುವುದು. 2. ಪ್ರಾಜೆಕ್ಟ್, ಜಿಲ್ಲಾ, ರಾಜ್ಯಮಟ್ಟಗಳಲ್ಲಿ ಸಾಮೂಹಿಕ ಹೋರಾಟ ನಡೆಸಿ, ಬಜೆಟ್ ಅಧಿವೇಶನದಲ್ಲಿ ರಾಷ್ಟ್ರಾದ್ಯಂತ ಒಂದು ದಿನದ ಜಬರದಸ್ತ್ ಪ್ರದರ್ಶನ ನಡೆಸುವುದು.
3. ದಿಲ್ಲಿಯಲ್ಲಿ 10 ದಿನಗಳ ನಿರಂತರ ಧರಣಿ - ಉಪವಾಸ ಸತ್ಯಾಗ್ರಹ ನಡೆಸುವುದು.
4. ಒಂದು ದಿನ ರಾಷ್ಟ್ರಾದ್ಯಂತ ಹರತಾಳ ಆಚರಣೆಗೆ ಕರೆ
5. ಡಿಸೆಂಬರ್ 8ರಂದು ಅಸಂಘಟಿತ ಕಾರ್ಮಿಕರ ಮಸೂದೆಗೆ ಪಾರ್ಲಿಮೆಂಟ್ ಚಲೋ
6. ಡಬ್ಲ್ಯುಟಿಓ ನೀತಿ ವಿರುದ್ಧ ಡಿಸೆಂಬರ್ 13 ರಂದು ಸ್ಥಳೀಯ ಮಟ್ಟದ ಹೋರಾಟದಲ್ಲಿ ಭಾಗವಹಿಸುವುದು.

○

ಮಹಿಳಾ ಮೀಸಲಾತಿ ಮಸೂದೆಗೆ ಒತ್ತಾಯಿಸಿ ನವೆಂಬರ್ 21, ಅಖಿಲ ಭಾರತ ಬೇಡಿಕೆ ದಿನ

ಸಂಸತ್ತು ಮತ್ತು ರಾಜ್ಯ ವಿಧಾನ ಸಭೆಗಳಲ್ಲಿ ಮೂರನೇ ಒಂದರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ನೀಡಲು ಮಸೂದೆ ಮಂಡಿಸಬೇಕೆಂದು ಸಿಪಿಐ(ಎಂ) ಪಕ್ಷವು ಹಲವಾರು ವರ್ಷಗಳಿಂದ ಒತ್ತಾಯಿಸುತ್ತಿದೆ. ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ಒಂದಲ್ಲ ಒಂದು ಕಾರಣ ನೀಡಿ, ಮಹಿಳಾ ಮೀಸಲಾತಿ ಮಸೂದೆ ಮಂಡನೆಯನ್ನು ಮುಂದಕ್ಕೆ ತಳ್ಳುತ್ತಿತ್ತು. ಆರ್‌ಜೆಡಿ, ಎಸ್‌ಪಿಯಂತಹ ಪಕ್ಷಗಳು ಮಹಿಳಾ ಮೀಸಲಾತಿಯ ಒಳಗಡೆಯಲ್ಲಿ ಇತರೆ ಹಿಂದುಳಿದ ವರ್ಗಗಳಿಗೂ ಮೀಸಲಾತಿ ಇರಬೇಕೆಂಬ ಒತ್ತಾಯ ಮುಂದಿಟ್ಟು ಮೂಲ ಮಸೂದೆಯನ್ನು ವಿರೋಧಿಸುತ್ತಿವೆ.

ಉಳಿದಂತೆ ಬಹುತೇಕ ಎಲ್ಲಾ ರಾಜಕೀಯ ಪಕ್ಷಗಳು ಮೂಲ ಮಸೂದೆಯನ್ನು ಒಪ್ಪಿದ್ದವು. ಆದರೆ ಇತ್ತೀಚೆಗೆ ನಡೆದ ಸಭೆಯಲ್ಲಿ ಬಿಜೆಪಿಯು, 'ರಾಜಕೀಯ ಪಕ್ಷಗಳು ಸೀಟು ಹಂಚಿಕೆ ಮಾಡುವಾಗಲೇ ಮೂರನೇ ಒಂದರಷ್ಟು ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು' ಎಂದು ಹೇಳುವ ಮೂಲಕ ಮೂಲ ಮಸೂದೆಯನ್ನು ಬೆಂಬಲಿಸುವ ತನ್ನ ನಿರ್ಧಾರದಿಂದ ಹಿಂದೆ ಸರಿದಿದೆ.

ಈ ಸಂದರ್ಭದಲ್ಲಿ ಮೂಲ ಮಸೂದೆಯನ್ನು ಚಳಿಗಾಲದ ಅಧಿವೇಶನದಲ್ಲಿ ಸಂಸತ್ತಿನಲ್ಲಿ ಮಂಡಿಸಬೇಕೆಂದು ಒತ್ತಾಯಿಸಿ, ನವೆಂಬರ್ 21ರಂದು ದೇಶದಾದ್ಯಂತ ಬೇಡಿಕೆ ದಿನ ಆಚರಿಸಬೇಕೆಂದು ಸಿಪಿಐ(ಎಂ) ಪಕ್ಷವು ನಿರ್ಧರಿಸಿದೆ. ಅಂದು ಮೆರವಣಿಗೆ, ರ್‍ಯಾಲಿಗಳನ್ನು ನಡೆಸಲು ಮತ್ತು ಕೇವಲ ಮಹಿಳೆಯರು ಮಾತ್ರವಲ್ಲದೆ ಇಡೀ ಪಕ್ಷವು ಈ ಪ್ರತಿಭಟನೆಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಬೇಕೆಂದು ಕರೆ ನೀಡಲಾಗಿದೆ.

○

ಚಿಂದಿಯಾಗಿರುವ ನೇಕಾರರ ಬದುಕು

ರಾಜ್ಯದ ಸುಮಾರು ಅರ್ಧ ಕೋಟಿ ಜನರಿಗೆ ಜೀವನಾಧಾರ ಕಲ್ಪಿಸಿರುವ ನೇಯ್ಗೆ ಉದ್ದಿಮೆ ಬಿಕ್ಕಟ್ಟಿನಲ್ಲಿದೆ. ನೇಕಾರರ ಬದುಕು ಹರಿದು ಚಿಂದಿಯಾಗಿದೆ. ಗೃಹ ಕೈಗಾರಿಕೆಯ ಈ ನೇಕಾರರು ಉತ್ಪಾದಿಸುವ ಬಟ್ಟೆಗಳನ್ನು ದೊಡ್ಡ ಬಂಡವಾಳಶಾಹಿಗಳು ದೊಡ್ಡ ಕಾರ್ಖಾನೆಗಳಲ್ಲಿ ಉತ್ಪಾದಿಸಲು ಅವಕಾಶ ನೀಡುವ ಕಾನೂನು ತಿದ್ದುಪಡಿ ಮಾಡಿರುವುದೇ ಈ ಬಿಕ್ಕಟ್ಟಿನ ಮೂಲ ಕಾರಣ. ಜಾಗತೀಕರಣ ನೀತಿಗಳ ಭಾಗವಾಗಿ ಬಂದ ಈ ಬದಲಾವಣೆಯನ್ನು ಹಿಮ್ಮೆಟ್ಟಿಸಿ ಹಿಂದಕ್ಕಟ್ಟುವುದೇ ಸಮಸ್ಯೆಗಿರುವ ಮೂಲ ಪರಿಹಾರ.

ಹೇಮಂತ್ ರಾಜ್
ದೊಡ್ಡಬಳ್ಳಾಪುರ


ಕರ್ನಾಟಕ ರಾಜ್ಯದಲ್ಲಿ ನೇಯ್ಗೆ ಉದ್ಯಮಕ್ಕೆ ಹಿಂದೆ ವಿಶಿಷ್ಟ ಸ್ಥಾನವಿತ್ತು. ರಾಜ್ಯದಲ್ಲಿ ಕೃಷಿಯನ್ನು ಬಿಟ್ಟರೆ ನೇಯ್ಗೆ ಉದ್ಯಮ ಪ್ರಧಾನ ಕಸುಬಾಗಿತ್ತು. ರಾಜ್ಯದ ಹಲವು ಜಿಲ್ಲೆಗಳಾದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬಾಗಲಕೋಟೆ, ಬಿಜಾಪುರ, ಬೆಳಗಾವಿ, ಗದಗ್, ಮಂಡ್ಯ ಜಿಲ್ಲೆಯ ಮಳವಳ್ಳಿ, ಕೊಳ್ಳೆಗಾಲ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಯ ಜನರ ಆರ್ಥಿಕತೆಗೆ ಈ ಉದ್ಯಮ ಆಸರೆಯಾಗಿತ್ತು. ರಾಜ್ಯದಲ್ಲಿ ಸುಮಾರು ಎಂಟರಿಂದ ಹತ್ತು ಲಕ್ಷ ಪವರ್ ಲೂಂಗಳಿದ್ದು ಸುಮಾರು ಅರ್ಧ ಕೋಟಿ ಜನ ಇದನ್ನೇ ನಂಬಿದ್ದಾರೆ. ಈ ಉದ್ಯಮ ಒಂದು ಗೃಹ ಕೈಗಾರಿಕೆಯಾಗಿದೆ. ಒಂದು ಮಗ್ಗವನ್ನು ನಡೆಸಬೇಕಾದರೆ ಇಡೀ ಮನೆ ಮಂದಿಯೆಲ್ಲಾ ಇದರಲ್ಲಿ ತೊಡಗಬೇಕಾಗುತ್ತದೆ. ಈ ಮಗ್ಗಗಳಲ್ಲಿ ನೇಯ್ದ ಸೀರೆಗಳಿಗೆ ವಿಶೇಷವಾದ ಸ್ಥಾನಮಾನವಿತ್ತು. ಹೇಗೆಂದರೆ ಯಾವುದೇ ಒಂದು ಸಮಾರಂಭವಾಗಲಿ ಮದುವೆ ಮತ್ತು ಹಬ್ಬಗಳಿಗೆ ಈ ಸೀರೆಗಳು ಸಾಂಪ್ರದಾಯಿಕ ಉಡುಗೆಯಾಯಿತು. ಇಷ್ಟೆ ಅಲ್ಲದೆ ದೇಶದ ಹಲವಾರು ರಾಜ್ಯಗಳಿಗೂ ಈ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಉತ್ಪಾದನೆಯಾದ ಸೀರೆಗಳು ಮಾರಾಟವಾಗುತ್ತಿದ್ದವು. ಅದರಲ್ಲೂ ವಿಶೇಷವಾಗಿ ದೊಡ್ಡಬಳ್ಳಾಪುರದಲ್ಲಿ ತಯಾರಾಗುತ್ತಿದ್ದ ಅಪ್ಪಟ ರೇಷ್ಮೆ ಬಟ್ಟೆಗೆ ಅಪಾರ ಬೇಡಿಕೆ ಇತ್ತು. ಏಕೆಂದರೆ ಈ ನಗರದಲ್ಲಿ ತಯಾರು ಆಗುತ್ತಿದ್ದ ಬಟ್ಟೆ ಸಾಮಾನ್ಯವಾಗಿ ಇಡೀ ದೇಶದಲ್ಲಿ ಎಲ್ಲೂ ಕೂಡ ತಯಾರು ಆಗುತ್ತಿರಲಿಲ್ಲ. ಒಂದು ಮೀಟರಿಗೆ 20-22 ಗ್ರಾಂ ತೂಕದ ಬಟ್ಟೆ ತಯಾರು ಮಾಡಲು ಯಾರಿಂದಲೂ ಸಾಧ್ಯವಾಗಿರಲಿಲ್ಲ. ಈ ಮಾದರಿಯ ಬಟ್ಟೆ ಪಾಕಿಸ್ತಾನ, ಬಾಂಗ್ಲಾ ದೇಶಗಳಿಗೆ ರಫ್ತು ಆಗುತ್ತಿತ್ತು. ಹಾಗು ಪಶ್ಚಿಮ ಬಂಗಾಳದಲ್ಲಿ ಕಾಳಿಪೂಜೆಯ ಸಂದರ್ಭಕ್ಕೆ ಸಾಂಪ್ರದಾಯಿಕ ಉಡುಗೆ ಆಗಿತ್ತು. ಆ ಸಂದರ್ಭದಲ್ಲಿ ಅಪಾರವಾದ ಬೇಡಿಕೆ ಬರುತ್ತಿತ್ತು.

ಉತ್ತರ ಭಾರತದ ಹಲವಾರು ರಾಜ್ಯಗಳಲ್ಲಿನ ವ್ಯಾಪಾರಸ್ಥರು ಇಲ್ಲಿ ತಯಾರಾಗುವ ಬಟ್ಟೆಗಳನ್ನು ಬಿಕರಿ ಮಾಡುತ್ತಿದ್ದು. ಈ ಗೃಹ ಕೈಗಾರಿಕೆಯು ಲಾಭದಾಯಕ ಕ್ಷೇತ್ರವಾಗಿ ಬೆಳೆಯಿತು. ಉದ್ಯಮವು ಮನೆ, ಮನೆಗೂ ವ್ಯಾಪಿಸಿತು. ಇದು ಹಲವಾರು ವರ್ಷಗಳ ಕಾಲ ಸರಾಗವಾಗಿ ನಡೆಯಿತು.

ಸುಮಾರು ತೊಂಬತ್ತರ ದಶಕದಲ್ಲಿ ಈ ಉದ್ಯಮದ ಮೇಲೆ ಉತ್ತರ ಭಾರತದ ದೊಡ್ಡ ಕೈಗಾರಿಕೆಗಳನ್ನು ನಡೆಸುತ್ತಿದ್ದ ದೊಡ್ಡ ಬಂಡವಾಳಗಾರರ ಕಣ್ಣು ಬಿತ್ತು. ಈ ಮಗ್ಗಗಳಲ್ಲಿ ನೇಯುವ ಸೀರೆಯಾಗಲಿ ರೇಷ್ಮೆ ಬಟ್ಟೆಯಾಗಲಿ ಅವರು ನಡೆಸುವ ದೊಡ್ಡ ಮಿಲ್ಲುಗಳಲ್ಲಿ ತಯಾರಿಸಲು ಕೇಂದ್ರ ಸರ್ಕಾರದ ನಿರ್ಬಂಧವಿತ್ತು. ಹಾಗಾಗಿ ಇಲ್ಲಿ ತಯಾರಾಗುವ ಬಟ್ಟೆಗೆ ಅಪಾರವಾದ ಬೇಡಿಕೆ ಇತ್ತು. ಹೇಗಾದರು ಮಾಡಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಬಂಡವಾಳಗಾರರು ನಿರ್ಬಂಧವನ್ನು ತೆಗೆಸಿದರು. ಅದೇ ಸಂದರ್ಭಕ್ಕೆ ಕೇಂದ್ರದಲ್ಲಿ ಸರ್ಕಾರ ನಡೆಸುತ್ತಿದ್ದ ಕಾಂಗ್ರೆಸ್ ಸರ್ಕಾರವು ಜಾರಿಗೆ ತಂದ ಜಾಗತೀಕರಣ ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳು ಈ ನಿರ್ಬಂಧವನ್ನು ತೆಗೆಯಲು ಸಹಕಾರಿಯಾದವು. ದೊಡ್ಡ ಕೈಗಾರಿಕೆಗಳಲ್ಲಿ ಇಲ್ಲಿ ತಯಾರಾಗುವ ಬಟ್ಟೆಗಳನ್ನು ಉತ್ಪಾದಿಸಲು ಪ್ರಾರಂಭಿಸಿದ ಮೇಲೆ ಉತ್ತರ ಭಾರತದ ಬಟ್ಟೆ ಬೇಡಿಕೆ ಕ್ರಮೇಣ ಕಡಿಮೆಯಾಯಿತು. ಇದರಿಂದಾಗಿ ವ್ಯಾಪಾರಸ್ಥರು ನೇಕಾರರ ಮನೆ ಬಾಗಿಲಿಗೆ ಬಂದು ಬಟ್ಟೆ ಖರೀದಿ ಮಾಡುವುದು ಹೋಗಿ ವ್ಯಾಪಾರಸ್ಥರ ಬಳಿಗೆ ನೇಕಾರರು ಹೋಗಿ ಬಟ್ಟೆ ಮಾರುವ ಪರಿಸ್ಥಿತಿ ಬಂದಿತು. ಪರಿಸ್ಥಿತಿಯ ದುರುಪಯೋಗ ಮಾಡಲು ವ್ಯಾಪಾರಸ್ಥರು ಮುಂದಾದರು. ಅದೇ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿ ಬಟ್ಟೆಗೆ ಬೇಕಾದ ಕಚ್ಚಾ ಮಾಲಿನ ಬೆಲೆಗಳ ಏರುಪೇರು, ಕಚ್ಚಾ ಮಾಲನ್ನು ಪೂರೈಸುವ ವ್ಯಾಪಾರಸ್ಥರ ಲಾಭಕೋರತನದಿಂದಾಗಿ ನೇಯ್ಗೆ ಉದ್ಯಮ ಮತ್ತಷ್ಟು ಬಿಕ್ಕಟ್ಟಿಗೆ ಸಿಲುಕಿತು. ಈ ಉದ್ಯಮಕ್ಕೆ ಬೇಕಾದ ಕಚ್ಚಾ ಮಾಲನ್ನು ಪೂರೈಕೆ ಮಾಡುವವರು ಬಟ್ಟೆಯನ್ನು ಖರೀದಿ ಮಾಡುವವರು ಕೂಡ. ಉತ್ತರ ಭಾರತದ ಮಾರವಾಡಿಗಳ ಕೈಯಲ್ಲಿ ವ್ಯಾಪಾರ ಕೇಂದ್ರೀಕೃತವಾಯಿತು. ಅಲ್ಲಿಂದ ಹಲವು ಬಗೆಯ ಸಮಸ್ಯೆಗಳು ಪ್ರಾರಂಭವಾದವು. ಇದಕ್ಕೆ ಪೂರಕವಾಗಿ ವಿದ್ಯುತ್ ಬೆಲೆ ಏರಿಕೆ, ಉದ್ಯಮಕ್ಕೆ ಸರ್ಕಾರದ ಕಡೆಯಿಂದ ಯಾವುದೇ ಪ್ರೋತ್ಸಾಹವಿಲ್ಲದೆ ಉದ್ಯಮ ಮತ್ತು ಬಿಕ್ಕಟ್ಟಿಗೆ ಸಿಲುಕಿತು.

ಈ ಉದ್ಯಮದಲ್ಲಿ ಕಾರ್ಮಿಕರ ಪರಿಸ್ಥಿತಿಯಂತೂ ಹೇಳತೀರದು. ಈ ರಂಗದಲ್ಲಿರುವುದು ಅಸಂಘಟಿತ ಕಾರ್ಮಿಕರು. ಇವರಿಗೆ ಯಾವುದೇ ಕಾರ್ಮಿಕ ಕಾನೂನುಗಳು ಆಸರೆಯಾಗಿಲ್ಲ. ಸಂಘಟಿತ ವಲಯದ ಕಾರ್ಮಿಕರಿಗೆ ಸಿಗುವ ಯಾವುದೇ ಸೌಲಭ್ಯ ಕೂಡ ಇವರಿಗೆ ಸಿಗುವುದಿಲ್ಲ, ವ್ಯಾಪಾರಸ್ಥರು ಮಾಡುವ ಮೋಸಕ್ಕೆ ನೇಕಾರರು ಬಲಿಯಾದರೆ ನೇಕಾರರು ಈ ಮೋಸವನ್ನು ನೇರವಾಗಿ ಕಾರ್ಮಿಕರ ಮೇಲೆ ಹಾಕುತ್ತಾರೆ. ಹೇಗೆಂದರೆ ವ್ಯಾಪಾರಸ್ಥರು ಸೀರೆ ಬೆಲೆ ಕಡಿಮೆ ಮಾಡಿದಂತೆಲ್ಲ ಕಾರ್ಮಿಕರ ಕೂಲಿ ಕಡಿಮೆ ಆಗುತ್ತದೆ. ಇವರಿಗೆ ಬೋನಸ್ ಎಂಬುದು ಆಯುಧ ಪೂಜೆಗೆ ಮಾಲೀಕರು ಕೊಡುವ 50-100 ರೂ. ಮಾತ್ರ ಇನ್ನು ಇವರಿಗೆ ಯಾವುದೇ ಸವಲತ್ತು ಸಿಗುತ್ತಿಲ್ಲ. ಇವರಿಗೆ ಕಾರ್ಮಿಕ ಕಾನೂನುಗಳ ಪರಿವೇ ಇರುವುದಿಲ್ಲ. ದಿನಕ್ಕೆ 12-14 ಗಂಟೆ ದುಡಿಮೆ ಮಾಡಿದರೂ ಇವರ ಜೀವನ ಕಷ್ಟವಾಗಿದೆ.

ಸರ್ಕಾರದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ನೀತಿಯಿಂದಾಗಿ ಈ ಗೃಹ ಕೈಗಾರಿಕೆಗಳು ದೇಶದ ತುಂಬೆಲ್ಲ ನಾಶವಾಗುತ್ತಿರುವಾಗ ಈ ಕೈಗಾರಿಕೆಯು ಕೂಡ ಹೊರತಾಗಿಲ್ಲ. ಇವರು ಈಗ್ಗೆ ಕಳೆದ ಹಲವು ವರ್ಷಗಳಿಂದ ಹಲವಾರು ಹೊಡೆತಗಳಿಂದ ತತ್ತರಿಸಿದ್ದಾರೆ. ಉದಾಹರಣೆಗೆ ಜಾಗತೀಕರಣದ ಫಲವಾಗಿ ವಿದೇಶಿ ಮಾರುಕಟ್ಟೆಯಿಂದ ಹರಿದುಬರುತ್ತಿರುವ ಬಟ್ಟೆಯೊಂದಿಗೆ ಪೈಪೋಟಿ ಮಾಡಲು ಅಶಕ್ತರಾದ ನೇಕಾರರು ಹಳೆಯ




ಯಂತ್ರಗಳಿಂದ ಜಾಗತಿಕ ಮಾರುಕಟ್ಟೆಗೆ ಬೇಕಾದ ಬಟ್ಟೆಯನ್ನು ತಯಾರಿಸಲಾಗದೆ ಕಂಗಾಲಾಗಿದ್ದಾರೆ. ಒಂದು ಕಡೆ ದೇಶೀಯ ದೊಡ್ಡ ಮಿಲ್ಲುಗಳು, ಮತ್ತೊಂದು ಕಡೆ ಬಹುರಾಷ್ಟ್ರೀಯ ಕಂಪನಿಗಳಿಂದ ಕಡಿಮೆ ವೆಚ್ಚದಲ್ಲಿ ಹೆಚ್ಚು ಉತ್ಪಾದನೆ. ಇದು ನಮ್ಮ ಬಟ್ಟೆಗಿದ್ದ ಬೇಡಿಕೆಯನ್ನು ಅಕ್ರಮಿಸಿ ಸಣ್ಣ ನೇಕಾರರನ್ನು ಸಂಪೂರ್ಣವಾಗಿ ನಾಶ ಮಾಡುತ್ತಿದೆ. ಇಂತಹ ಸಂದರ್ಭದಲ್ಲಿ ಉದ್ದಿಮೆಯನ್ನು ತೊರೆದು ಬೇರೆ ಕೆಲಸ ಅರಿಯದ ನೇಕಾರನು ಈ ಪರಿಸ್ಥಿತಿಯು ಸರಿಹೋಗಬಹುದೆಂದು ತಿಳಿದು ಹಲವು ರೀತಿಯ ಸಾಲಗಳಿಗೆ ಸಿಲುಕಿಕೊಂಡಿದ್ದಾನೆ. ಅವುಗಳಿಂದ ಬಿಡಿಸಿಕೊಳ್ಳಲಾಗದೆ ಉದ್ದಿಮೆಯೂ ಸರಿ ಹೋಗದೆ ಹಲವಾರು ನೇಕಾರ ಕುಟುಂಬಗಳು ಬೀದಿಗೆ ಬಿದ್ದಿವೆ. ಬೇರೆ ಬೇರೆ ಉದ್ಯೋಗ ಹುಡುಕಿಕೊಂಡು ಊರೂರು ಅಲೆಯುವ ಪರಿಸ್ಥಿತಿಗೆ ತಲುಪಿದ್ದಾರೆ. ಇನ್ನೂ ಕೆಲವರು ಹೋಟೆಲ್, ಅಂಗಡಿ ನಿರ್ವಹಣೆ, ಕಡಲೆಕಾಯಿ ಮಾರಾಟ ಮುಂತಾದ ಕೆಲಸಕ್ಕಿಳಿದಿದ್ದಾರೆ. ಜೀವನ ನಿಕೃಷ್ಟವಾಗಿದೆ.

ಸದ್ಯದ ಪರಿಸ್ಥಿತಿಯಲ್ಲಿ ಸಾಲಗಳಿಗೆ ಸಿಲುಕಿರುವ ನೇಕಾರರು ಮನೆ ಮಾರುಗಳನ್ನು ಕಳೆದುಕೊಂಡು ಮಾಡಲು ಕೆಲಸವಿಲ್ಲದೆ ಅನ್ಯ ಕೆಲಸ ತಿಳಿಯದೆ ಆಕಾಶದತ್ತ ಮುಖ ಮಾಡಿದ್ದಾರೆ. ಸಾಲ ನೀಡಿರುವ ಬ್ಯಾಂಕ್, ಸ್ಥಳೀಯ ಹಣಕಾಸು ಸಂಸ್ಥೆಗಳು ಖಾಸಗಿ ಬಡ್ಡಿ ವ್ಯಾಪಾರಸ್ಥರ ಕಿರುಕುಳ ಹೇಳತೀರದು. ಹರಾಜು ಆಸ್ತಿ ಸ್ವಾಧೀನ, ಮಾನಸಿಕ ಕ್ಷೋಭೆಗಳಿಗೆ ಈಡುಮಾಡಿದೆ. ಈ ಎಲ್ಲಾ ಬಿಕ್ಕಟ್ಟುಗಳಿಗೆ ಸರ್ಕಾರದ ನೀತಿಗಳೇ ಕಾರಣವಾಗಿದೆ. ಈ ಎಲ್ಲಾ ಸಮಸ್ಯೆಗಳ ವಿರುದ್ಧ ಹೋರಾಡಲು ಹುಟ್ಟಿಕೊಂಡ ಸಂಸ್ಥೆಯೇ ನೇಕಾರರ ಹೋರಾಟ ಸಮಿತಿ. ಈ ಸಮಿತಿಯಿಂದ ವ್ಯಾಪಾರಸ್ಥರು ಕೃತಕ ಅಭಾವವನ್ನು ಸೃಷ್ಟಿಸಿ ಕಚ್ಚಾ ಮಾಲಿನ ಬೆಲೆಗಳನ್ನು ವಿಪರೀತ ಏರಿಸುತ್ತಿರುವುದನ್ನು ವಿರೋಧಿಸಿ ನಡೆದ ಹೋರಾಟದಲ್ಲಿ 10 ದಿನ ಕಚ್ಚಾ ಮಾಲಿನ ವಹಿವಾಟನ್ನು ಬಂದ್ ಮಾಡಲಾಯಿತು. 10 ದಿನಗಳಲ್ಲಿ ಹಲವಾರು ಹೋರಾಟಗಳು ನಡೆದವು. ಈ ಹೋರಾಟಕ್ಕೆ ಮಣಿದ ಮಾರವಾಡಿಗಳು ಕಂಪನಿಗಳಲ್ಲಿ ಬೆಲೆ ಹೆಚ್ಚಾಗದೆ ಬೆಲೆಗಳನ್ನು ಹೆಚ್ಚಿಸಿದ್ದರೆ. 7,500 ಕೆ.ಜಿ. ಕಚ್ಚಾ ಮಾಲನ್ನು ದಂಡವಾಗಿ ಕಡಿಮೆ ಬೆಲೆಗೆ ಮಾರಲು ಒಪ್ಪಿಕೊಂಡರು. ಹೋರಾಟ ಸಮಿತಿ ಹೋರಾಟಕ್ಕೆ ಜಯ ಸಿಕ್ಕಿತು.

ನಂತರ ಪಕ್ಕದ ರಾಜ್ಯಗಳಾದ ತಮಿಳುನಾಡು, ಮಹಾರಾಷ್ಟ್ರ, ಆಂಧ್ರ ಪ್ರದೇಶಗಳಲ್ಲಿ ನೇಕಾರರಿಗೆ ವಿದ್ಯುತ್ ಸಬ್ಸಿಡಿ-ದರದಲ್ಲಿ ನೀಡುತ್ತಿದ್ದು ನಮ್ಮ ರಾಜ್ಯದಲ್ಲಿ ವಿದ್ಯುತ್ ಬೆಲೆಗಳು ಬಾರಿ ದುಬಾರಿಯಾಗಿದ್ದು ಉತ್ಪಾದನಾ ವೆಚ್ಚ ಹೆಚ್ಚಾಗುತ್ತಿದ್ದು ಉದ್ಯಮದ ಬಿಕ್ಕಟ್ಟಿಗೆ ಇದು ಕಾರಣವಾಯಿತು. ಈ ಎಲ್ಲಾ ಪ್ರಶ್ನೆಗಳನ್ನು ಸಮಾಲೋಚಿಸಿ ಒಂದು ತೀರ್ಮಾನಕ್ಕೆ ಬಂದು ವಿದ್ಯುತ್ ರಿಯಾಯಿತಿ ಮತ್ತು ಕಚ್ಚಾ ಮಾಲಿನ ಪೂರೈಕೆ, ನೇಕಾರರು ತಯಾರು ಮಾಡಿದ ಬಟ್ಟೆಯನ್ನು ಸಹಕಾರ ಸಂಘಗಳಿಂದ ಕೊಳ್ಳಲು ಸರ್ಕಾರದ ನೆರವು, ನೇಕಾರರು ಪಡೆದಿರುವ ಸಾಲದ ಮೇಲಿನ ಬಡ್ಡಿ ಮತ್ತು ದಂಡಾ ಬಡ್ಡಿ ಮನ್ನಾ, ನೇಕಾರರು ಮತ್ತು ಕಾರ್ಮಿಕರಿಗೆ ಆರೋಗ್ಯ ವಿಮೆ ಹಾಗೂ ಕಾರ್ಮಿಕರ ವಸತಿ ಪ್ರಶ್ನೆ ಎತ್ತಿ ದೀರ್ಘಕಾಲದ ಹೋರಾಟಕ್ಕೆ ನೇಕಾರರು ಸಜ್ಜಾದರು. ಸುಮಾರು ನಾಲ್ಕು ವರ್ಷಗಳ ಕಾಲ ನಿರಂತರ ಹೋರಾಟ - ಮುಖ್ಯಮಂತ್ರಿ ಮನೆ ಮುಂದೆ ಸಹಸ್ರಾರು ನೇಕಾರರ ಧರಣಿ - ದೊಡ್ಡಬಳ್ಳಾಪುರ ಬಂದ್- ರಸ್ತೆ ತಡೆ ಧರಣಿ ನಿರಂತರವಾಗಿ ನಡೆಯಿತು. ಮೊದಲು ಸರ್ಕಾರ ಈ ಬೇಡಿಕೆಗಳ ಬಗ್ಗೆ ಬೇಜವಾಬ್ದಾರಿಯಿಂದ ವರ್ತಿಸಿತು. ಹೋರಾಟಗಳು ಬೇರೆ ಜಿಲ್ಲೆಗಳಲ್ಲಿ ಪ್ರಾರಂಭವಾದ ಮೇಲೆ ಸರ್ಕಾರ ಮಣಿಯಲೇಬೇಕಾಯಿತು.

ಅಂದಿನ ಎಸ್.ಎಂ. ಕೃಷ್ಣ ಸರ್ಕಾರ ನೇಕಾರರ ಪ್ಯಾಕೇಜ್ ಘೋಷಣೆ ಮಾಡಿತು. ಆ ಪ್ಯಾಕೇಜ್‌ನಲ್ಲಿ ನಾವು ಎತ್ತಿದ ಎಲ್ಲ ಬೇಡಿಕೆಗಳು ಇದ್ದವು. ಆದರೆ ಅವು ಯಾವುವು ಜಾರಿಯಾಗಲಿಲ್ಲ. ನಂತರ ಬಂದ ಸಮ್ಮಿಶ್ರ ಸರ್ಕಾರ ವಿದ್ಯುತ್ ರಿಯಾಯಿತಿ, ಸಹಾಯ ಧನ, ಬಡ್ಡಿ ಮನ್ನಾ ಯೋಜನೆ, ಆರೋಗ್ಯ ವಿಮಾ ಯೋಜನೆಗಳನ್ನು ಜಾರಿಗೆ ತಂದಿದೆ. ಈ ರಿಯಾಯಿತಿಗಳಿಂದ ಸ್ವಲ್ಪ ಮಟ್ಟಿಗೆ ನೇಕಾರರು ಉಸಿರಾಡುವಂತಾಗಿದೆ. ಆದರೆ ಮುಳುಗುತ್ತಿರುವ ಉದ್ಯಮವನ್ನು ಉಳಿಸಲು ಇಷ್ಟು ಸಾಲದು. ಇದರ ಜೊತೆಗೆ ನೇಕಾರರು ತಯಾರಿಸುವ ಬಟ್ಟೆ ಅಥವಾ ಸೀರೆಗಳನ್ನು ದೊಡ್ಡ ಮಿಲ್ಲುಗಳು ಬಹುರಾಷ್ಟ್ರೀಯ ಕಂಪನಿಗಳು ತಯಾರು ಮಾಡುವುದನ್ನು ನಿಷೇಧಿಸಿ ಕಾನೂನು ಜಾರಿ ಮಾಡಿದರೆ ಮಾತ್ರ ಈ ಉದ್ದಿಮೆಗೆ ಸ್ವಲ್ಪ ಮಟ್ಟಿಗೆ ಸಹಾಯ ಮಾಡಿದಂತಾಗುತ್ತದೆ. ○



ಅಮೆರಿಕನ್ ವಾಯುಪಡೆ ತುಕಡಿಗೆ ಕೊಲ್ಕತ್ತಾ, ಕಲೈಕುಂಡಾದಲ್ಲಿ ಬೃಹತ್ ಪ್ರತಿಭಟನೆ

ಪಶ್ಚಿಮ ಬಂಗಾಳದ ಕಲೈಕುಂಡದಲ್ಲಿ ಭಾರತ ಮತ್ತು ಅಮೆರಿಕಾದ ವಿಮಾನ ಪಡೆಗಳ ಜಂಟಿ ಕವಾಯತಿನ ವಿರುದ್ಧ ಸಿಪಿಐ(ಎಂ) ನ ಬಂಗಾಳ ಘಟಕ ಮತಪ್ರದರ್ಶನಗಳ, ಚಳುವಳಿಗಳ ಕಾರ್ಯಕ್ರಮವನ್ನು ವ್ಯಾಪಕ ಸ್ವರೂಪದಲ್ಲಿ ನಡೆಸಿದೆ. ನವೆಂಬರ್ 5 ರಂದು ಅಮೆರಿಕನ್ ವಿಮಾನ ಪಡೆಯ ಸಿಬ್ಬಂದಿ ಕೊಲ್ಕತಾದಲ್ಲಿ ಬಂದಿಳಿದಾಗ ಹಾಗೂ ನಂತರ ಅಲ್ಲಿಂದ ಹೊರಟು ಕಲೈಕುಂಡದಲ್ಲಿ ಬಂದಿಳಿದಾಗ ಬೃಹತ್ ಮತಪ್ರದರ್ಶನಗಳು ನಡೆದವು. ನವೆಂಬರ್ 7 ರಂದು ಕವಾಯತುಗಳ ಸಮಯದಲ್ಲೂ ಪ್ರತಭಟನೆ ನಡೆಸಲಾಯಿತು. ಡಾರ್ಜಿಲಿಂಗ್ ಜಿಲ್ಲೆಯ ಬಾಗ್ ಡೋಗ್ರಾ ವಿಮಾನ ನಿಲ್ದಾಣದಲ್ಲಿ ಮತಪ್ರದರ್ಶನ ನಡೆಯಿತು.



ನವೆಂಬರ್ 5 ರ ಮಧ್ಯಾಹ್ನ ಅಮೆರಿಕನ್ ವಿಮಾನ ಪಡೆ ಸಿಬ್ಬಂದಿ ದೈತ್ಯಗಾತ್ರದ ಜೆಸಿ10 ವಿಮಾನದಲ್ಲಿ ಕೊಲ್ಕತಾ ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ ಸಾವಿರಾರು ಮತಪ್ರದರ್ಶನಕಾರರು ಕೆಂಬಾವುಟ ಹಿಡಿದು ವಿಮಾನ ನಿಲ್ದಾಣದ ದ್ವಾರದತ್ತ ಧಾವಿಸಿ ಜಂಟಿ ಕವಾಯತಿನ ವಿರುದ್ಧ ಘೋಷಣೆಗಳನ್ನು ಕೂಗಲಾರಂಭಿಸಿದರು. ಈ ಮತಪ್ರದರ್ಶನ ಎಷ್ಟು ತೀವ್ರವಾಗಿತ್ತೆಂದರೆ ಸಿಬ್ಬಂದಿ ವಿಮಾನದಿಂದ ಇಳಿಯುವುದನ್ನು ವಿಳಂಬಗೊಳಿಸುತ್ತಾಬಂದರು. ಕೊನೆಗೆ ಇಳಿಯಬೇಕಾಗಿ ಬಂದಾಗ ಅವರಿಗಾಗಿ ಏರ್ಪಡಿಸಿದ್ದ ಹೋಟೆಲುಗಳತ್ತ ಹೋಗಲು ಹಿಂಜರಿದರು. ಅವರು ಹೋಟೆಲುಗಳಿಗೆ ಹೋದಾಗಲ್ಲೂ ಮತ ಪ್ರದರ್ಶನಕಾರರನ್ನು ಎದುರಿಸಬೇಕಾಯಿತು.

ಅಲ್ಲಿಂದ ಅವರನ್ನು ಕಲೈಕುಂಡ ವಿಮಾನ ನೆಲೆಗೆ ಕೊಂಡೊಯ್ಯುವುದನ್ನೂ ಮಧ್ಯರಾತ್ರಿಯ ವರೆಗೆ ವಿಳಂಬಗೊಳಿಸಿ ನಂತರ ಕಳ್ಳತನದಿಂದ ಕೊಲ್ಕತ್ತಾ ವಿಮಾನ ನಿಲ್ದಾಣದಿಂದ ಹಾರಿ ಕಲೈಕುಂಡ ವಿಮಾನನೆಲೆಯಲ್ಲೂ ಅದೇ ರೀತಿ ಕಳ್ಳತನದಿಂದ ಇಳಿಯಲಾಯಿತು. ಆದರೆ ಅಲ್ಲಿಯೂ ತೀವ್ರ ಮತಪ್ರದರ್ಶನಗಳನ್ನು ಕಂಡು ಅಮೆರಿಕಸ್ ವಿಮಾನ ಪಡೆಯ ಅಧಿಕಾರಿಗಳಿಗೆ ಆಶ್ಚರ್ಯವಾಗಿರಬೇಕು. ಅವರಲ್ಲಿ ಕೆಲವು ಕುತೂಹಲ ತಡೆಯದೆ ವಿಮಾನ ನೆಲೆಯ ಗಡಿಯತ್ತ ಬಂದು, ಅವರ ಹವ್ಯಾಸದಂತೆ ಮತಪ್ರದರ್ಶನಕಾರರ ಫೋಟೋ ತೆಗೆಯಲು ಪ್ರಯತ್ನಿಸಿದರು. ಆದರೆ ಮತಪ್ರದರ್ಶನದ ತೀವ್ರತೆ, ಕಪ್ಪು ಬಾವುಟಗಳನ್ನು ಕಂಡು 'ಗೋಬ್ಯಾಕ್' ಎಂಬ ಘೋಷಣೆಗಳನ್ನು ಕೇಳಿ ವಿಮಾನ ನೆಲೆಯೊಳಗೆ ಓಡಿ ಹೋದರು.

ಜಂಟಿ ಕವಾಯತು ನಡೆಯುವವರೆಗೆ ರಾಜ್ಯದಾದ್ಯಂತ ಇಂತಹ ಮತಪ್ರದರ್ಶನಗಳು ನಡೆಯುತ್ತವೆ. ಶಾಂತಿಯುತವಾಗಿ, ಯಾವುದೇ ಅರಾಜಕತೆಯಿಲ್ಲದೆ ಮುಂದುವರೆಯುತ್ತವೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಅನಿಲ್ ಬಿಸ್ವಾಸ್ ಹೇಳಿದರು. ಭಾರತದ ಮಣ್ಣಿನಲ್ಲಿ ಜಂಟಿ ಮಿಲಿಟರಿ ಕವಾಯತುಗಳು ಸಲ್ಲ, ಭಾರತದಲ್ಲಿ ಅಮೆರಿಕನ್ ನೆಲೆಗಳಿಗೆ ಅವಕಾಶ ಕೊಡಬಾರದು, ಭಾರತ ತನ್ನ ಸ್ವತಂತ್ರ ವಿದೇಶಾಂಗ ನೀತಿಯನ್ನು ಕೈಬಿಡಬಾರದು ಎಂದು ಸಿಪಿಐ(ಎಂ) ನ ಅಭಿಪ್ರಾಯವನ್ನು ಅವರು ಪುನರುಚ್ಚರಿಸಿದರು.

ಇದು ಕೇವಲ 'ಸಾಮಾನ್ಯ' ಕವಾಯತು ಎಂಬ ಕೇಂದ್ರ ರಕ್ಷಣಾ ಮಂತ್ರಿ ಪ್ರಣಬ್ ಮುಖರ್ಜಿಯರ ಟಿಪ್ಪಣಿಯನ್ನು ಟೀಕಿಸುತ್ತಾ ಅವರು ಸಾಮ್ರಾಜ್ಯಶಾಹಿ ಶಕ್ತಿಗಳೊಡನೆ ಜಂಟಿ ಮಿಲಿಟರಿ ಕವಾಯತುಗಳು ಸಾಮಾನ್ಯ ಕವಾಯತುಗಳೆಂದು ಸಿಪಿಐ(ಎಂ) ತಳ್ಳಿಹಾಕುವುದಿಲ್ಲ ಎಂದ ಅನಿಲ್ ಬಿಸ್ವಾಸ್‌ರವರು, ಈ ಮತಪ್ರದರ್ಶನ ದೇಶದ ಸಾರ್ವಭೌಮತೆ ಮತ್ತು ಭದ್ರತೆಯತ್ತ ಒಂದು ಮಹತ್ವದ ಪ್ರಯತ್ನ ಎಂದರು. ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಯಾವುದೇ ರೀತಿಯಲ್ಲಿ ಬೆಂಬಲ ನೀಡುವವರನ್ನು ಬಂಗಾಳದ ಮಣ್ಣಿನಿಂದ ಹೊಟ್ಟೆನಂತೆ ಗುಡಿಸಿಬಿಡಲಾಗುವುದು ಎಂದು ಅವರು ಎಚ್ಚರಿಸಿದರು.

ಜಪ್ಪಿನಮೊಗರುವಿನಲ್ಲಿ ಡಿ.ವೈ.ಎಫ್.ಐ. ವತಿಯಿಂದ 5ನೇ ವರ್ಷದ ದಸರಾ ಕ್ರೀಡೋತ್ಸವ

ಡಿ.ವೈ.ಎಫ್.ಐ. ಜಪ್ಪಿನ ಮೊಗರು ಘಟಕದ ವತಿಯಿಂದ "ದಸರಾ ಕ್ರೀಡೋತ್ಸವ"ವು ತಾ.09.10.2005ನೇ ಆದಿತ್ಯವಾರ ಜಪ್ಪಿನ ಮೊಗರು ಸರಕಾರಿ ಕನ್ನಡ ಮಾದರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಅತೀ ವಿಜೃಂಭಣೆಯಿಂದ ಜರುಗಿತು.

ಶಾಲಾ ಮಕ್ಕಳಿಗಾಗಿ ಹುಡುಗರ ಹಾಗೂ ಹುಡುಗಿಯರ 'ಹಗ್ಗ-ಜಗ್ಗಾಟ' ಸ್ಪರ್ಧೆ ನಡೆಯಿತು. ಹುಡುಗರ 'ಹಗ್ಗ - ಜಗ್ಗಾಟ" ಸ್ಪರ್ಧೆಯಲ್ಲಿ ಪ್ರಥಮ ಬಜಾಲು ಶಾಲೆ, ದ್ವಿತೀಯ ಜಪ್ಪಿನ ಮೊಗರು ಶಾಲೆ ಪಡೆಯಿತು. ಹುಡುಗಿಯರ 'ಹಗ್ಗ-ಜಗ್ಗಾಟ' ಸ್ಪರ್ಧೆಯಲ್ಲಿ ಪ್ರಥಮ ಜಪ್ಪಿನ ಮೊಗರು ಶಾಲೆ ದ್ವಿತೀಯ ಬಹುಮಾನ ಬಜಾಲು ಶಾಲೆ ಪಡೆಯಿತು.

ಪುರುಷರಿಗಾಗಿ ವಿವಿಧ ಕ್ರೀಡಾ ಸ್ಪರ್ಧೆಯಲ್ಲಿ 'ವಾಲಿಬಾಲ್'ನ ಪ್ರಥಮ ಸ್ಥಾನವನ್ನು ಮಲ್ಲಿಕಾರ್ಜುನ ಕಡೆಕಾರು ಹಾಗೂ ದ್ವಿತೀಯ ಸ್ಥಾನವನ್ನು ಫ್ರೆಂಡ್ಸ್ ಕ್ರಿಕೆಟರ್ಸ್ ತಂಡೊಳಿಗೆ ತಂಡವು



ಪಡೆಯಿತು. ಪುರುಷರಿಗಾಗಿ ನಡೆದ 'ಹಗ್ಗ-ಜಗ್ಗಾಟ' ಸ್ಪರ್ಧೆಯಲ್ಲಿ ಪ್ರಥಮ ಮಲ್ಲಿಕಾರ್ಜುನ ಕಡೆಕಾರು. ದ್ವಿತೀಯ ಸೆವೆನ್‌ಸ್ಟಾರ್ ಜಪ್ಪಿನ ಮೊಗರು ತಂಡವು ಪಡೆಯಿತು.

ಮಹಿಳೆಯರಿಗಾಗಿ ನಡೆದ ವಿವಿಧ ಕ್ರೀಡಾಸ್ಪರ್ಧೆಯಲ್ಲಿ 'ತ್ರೋಬಾಲ್'ನ ಪ್ರಥಮ ಸ್ಥಾನವನ್ನು ವೈಷ್ಣವಿ ಕಡೆಕಾರು. ಬಿ. ತಂಡವು ಹಾಗೂ ದ್ವಿತೀಯ ಸ್ಥಾನವನ್ನು ವೈಷ್ಣವಿ ಕಡೆಕಾರು ಎ.ತಂಡವು ಪಡೆಯಿತು. ಮಹಿಳೆಯರಿಗಾಗಿ ನಡೆದ 'ಹಗ್ಗ-ಜಗ್ಗಾಟ' ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ವೈಷ್ಣವಿ ಕಡೆಕಾರು.ಎ ತಂಡ ಹಾಗೂ ದ್ವಿತೀಯ ಸ್ಥಾನವನ್ನು ವೈಷ್ಣವಿ ಕಡೆಕಾರು ಬಿ. ತಂಡವು ಪಡೆಯಿತು.

ಇದೇ ಸಂದರ್ಭದಲ್ಲಿ ಜಪ್ಪಿನ ಮೊಗರುವಿನ ಎರಡು ಅಂಗನವಾಡಿ ಶಾಲೆಯ ಮಕ್ಕಳಿಗೆ ಹಾಗೂ ಸ್ಥಳೀಯ ಮಕ್ಕಳಿಗೆ ವಿವಿಧ ಕ್ರೀಡಾ ಸ್ಪರ್ಧೆಯನ್ನು ನಡೆಸಲಾಯಿತು.

ಕಾಂ. ಕೃಷ್ಣೇಗೌಡ - ಕಾಂ. ರೇಣುಕ ಸರಳ ವಿವಾಹ

ಎಸ್ಸೆಫ್ಐ ಮಾಜಿ ರಾಜ್ಯ ಉಪಾಧ್ಯಕ್ಷ ಹಾಲಿ, ಡಿವೈಎಫ್ಐ ಮುಖಂಡ ಕಾಂ. ಟಿ.ಎಲ್. ಕೃಷ್ಣೇಗೌಡ ಮತ್ತು ಎಸ್ಸೆಫ್ಐ ಮಾಜಿ ಕಾರ್ಯಕರ್ತರು ಹಾಲಿ ಶಿಕ್ಷಕರೂ ಆದ ಕಾಂ. ರೇಣುಕಾರವರ ಮದುವೆ ಇತ್ತೀಚೆಗೆ ಮಂಡ್ಯಜಿಲ್ಲೆ ಮಳವಳ್ಳಿ ತಾಲ್ಲೂಕಿನಲ್ಲಿ ಸರಳವಾಗಿ ಅರ್ಥಪೂರ್ಣವಾದ ರೀತಿಯಲ್ಲಿ ನಡೆಯಿತು.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮಂಡ್ಯ ಜಿಲ್ಲಾ ಸಂಘಟನಾ ಸಮಿತಿ ಸದಸ್ಯರೂ ಆಗಿರುವ ಟಿ.ಎಲ್.ಕೃಷ್ಣೇಗೌಡ ಹಾಗೂ ರೇಣುಕಾ ರವರ ಮದುವೆ ಮಂಡ್ಯ ಜಿಲ್ಲೆಯ ಪ್ರೇಕ್ಷಣೀಯ ಸ್ಥಳವಾದ ಶಿಂಷಾ (ಬ್ಲಫ್)ದಲ್ಲಿ ಅತ್ಯಂತ ಸರಳವಾಗಿ ದಿನಾಂಕ ಅಕ್ಟೋಬರ್ 23 ರಂದು ಜರುಗಿತು.

ಅರ್ಥಹೀನ ಆಚರಣೆ, ಮೌಢ್ಯ ಕಂದಾಚಾರಗಳು, ಪುರೋಹಿತಶಾಹಿ ಮಂತ್ರ, ಅನಾವಶ್ಯಕ ಆಡಂಬರ ಮುಂತಾದ ಆಚರಣೆಗಳಿಂದ ಸಂಪೂರ್ಣ ಮುಕ್ತವಾದ, ಜಾತಿ ಕಟ್ಟುಪಾಡುಗಳನ್ನು ಮೀರಿದ ಅಂತರ್‌ಜಾತೀಯ ಮದುವೆಗೆ ಗಂಡು - ಹೆಣ್ಣಿನ ತಂದೆ-ತಾಯಿಗಳು, ಬಂಧುಗಳು, ಹಿತೈಷಿಗಳು ಹಾಗೂ ಪಕ್ಷ, ಸಾಮೂಹಿಕ ಸಂಘಟನೆಗಳು ನೂರಾರು ಮಂದಿ ಸಾಕ್ಷಿಯಾಗಿ ಶುಭ ಹಾರೈಸಿದರು.

ಕತ್ತಲನ್ನು ದೂರ ಮಾಡಿ ಬೆಳಕನ್ನು ನಾಡಿಗೆ ನೀಡುವ - ಏಷ್ಯಾದಲ್ಲೇ ಪ್ರಥಮ ಜಲವಿದ್ಯುತ್ ಸ್ಥಾವರವೆಂಬ ಖ್ಯಾತಿಗೆ ಪಾತ್ರವಾಗಿರುವ ಮಳವಳ್ಳಿ ತಾಲ್ಲೂಕಿನ ಶಿಂಷಾದಲ್ಲಿ ಹಾಜರಿದ್ದವರು ಅನಿಷ್ಟ, ಜೀವ ವಿರೋಧಿ ಕಂದಾಚಾರದ ಕತ್ತಲು ಸಂಪೂರ್ಣ ನಾಶವಾಗಲು ಇಂತಹ ಮದುವೆಗಳು ಸಾರ್ವತ್ರಿಕಗೊಳ್ಳಲಿ ಎಂದು ಹರಸಿದರು.

ಮದುವೆ ಸಂದರ್ಭದಲ್ಲಿ ಮಾತನಾಡಿದ ಸಿಪಿಐ(ಎಂ) ರಾಜ್ಯಕಾರ್ಯದರ್ಶಿ ಕಾಂ. ಜಿ.ಎನ್.ನಾಗರಾಜ್‌ರವರು ಈ ಮದುವೆ ಹಲವಾರು ಕಾರಣಗಳಿಂದ ವಿಶಿಷ್ಟವಾಗಿವೆ. ವರ ಮೈಸೂರು ಭಾಗದ ಬಯಲು ಸೀಮೆಗೆ ಸೇರಿದವನಾಗಿದ್ದರೆ, ವಧು ಘಟ್ಟದ ಕೆಳಗಿನ ಕರಾವಳಿ ಪ್ರದೇಶದವರು. ಎರಡು ವಿಭಿನ್ನ ಪ್ರಾದೇಶಿಕ ಸಂಸ್ಕೃತಿಗಳ ಸಮ್ಮಿಲನದ ಸಂಕೇತ ವಾಗಿರುವುದರ ಜೊತೆಗೆ ಜಾತಿಯ ಕಟ್ಟುಪಾಡುಗಳನ್ನು ಮೀರಿದ ಅಂತರ್‌ಜಾತಿಯ ವಿವಾಹ. ಇಂತಹ ಮದುವೆಗೆ ಎರಡು ಕಡೆಯ ಬಂಧುಗಳು ಬಂದು ಹಾರೈಸುತ್ತಿರುವುದು ಕೂಡ ಅನುಕರಣೀಯ ಎಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಹಾಗೂ ಶಾಸಕರಾದ ಕಾಂ. ಜಿ.ವಿ.ಶ್ರೀರಾಮರೆಡ್ಡಿ ಯವರು, ಮದುವೆ ಎನ್ನುವುದು ಅತ್ಯಂತ ಖಾಸಗಿಯಾದ ವಿಚಾರ. ಪುರುಷಪ್ರಧಾನ ಮೌಲ್ಯ, ಪಾಳೇಗಾರಿ ದಬ್ಬಾಳಿಕೆ ಅಸ್ತ್ರಗಳು ನಮ್ಮ ದೇಶದ ಮಹಿಳೆಯರನ್ನು ಎರಡನೆ ದರ್ಜೆಯ ಪ್ರಜೆಗಳನ್ನಾಗಿ ರೂಪಿಸಿದೆ. ಜಾಗತೀಕರಣದ ನೀತಿಗಳಿಂದಾಗಿ ಮಹಿಳೆಯರ ಮೇಲಿನ ಶೋಷಣೆ ತೀವ್ರವಾಗಿ ಹೆಚ್ಚಿದೆ. ಇಂತಹ ಶೋಷಣೆಯ ಭಾಗವಾಗಿರುವ ವರದಕ್ಷಿಣೆ, ಆಡಂಬರದ ವರೋಪಚಾರ ಮುಂತಾದವನ್ನು ಧಿಕ್ಕರಿಸಿ ಎಂದು ಕರೆ ನೀಡಿದರು.

ಮದುವೆ ಕಾರ್ಯಕ್ರಮದ ನಿರೂಪಣೆಯನ್ನು ಸಿಪಿಐ(ಎಂ) ಮಂಡ್ಯ ಜಿಲ್ಲಾ ಸಂ. ಸಮಿತಿಯ



ಕಾರ್ಯದರ್ಶಿ ಕಾಂ. ಎಂ.ಪುಟ್ಟಮಾದು ನಿರ್ವಹಿಸಿದರು. ವೇದಿಕೆಯಲ್ಲಿ ವರನ ತಂದೆ-ತಾಯಿಗಳಾದ ಲಿಂಗೇಗೌಡ, ಕುಳ್ಳಮ್ಮ ಹಾಗೂ ವಧುವಿನ ತಂದೆ ತಾಯಿಗಳಾದ ಉಗ್ಗಪ್ಪ ಪೂಜಾರಿ, ರಾಜೀವಿರವರು ಉಪಸ್ಥಿತರಿದ್ದರು.

ವರದಿ - **ಯಶವಂತ ಟಿ.**

ಮುನ್ನೂರು ಗ್ರಾಮ ಪಂಚಾಯತ್‌ಗೆ ಮುತ್ತಿಗೆ

ಸಿಪಿಐ(ಎಂ) ಪಕ್ಷದ ರಾಷ್ಟ್ರೀಯ ಹೋರಾಟದ ಕಾರ್ಯಕ್ರಮದ ಅಂಗವಾಗಿ ಆಹಾರ, ಭೂಮಿ, ಉದ್ಯೋಗ ಮತ್ತು ಗ್ರಾಮದ ಹಲವಾರು ಸಮಸ್ಯೆಗಳನ್ನು ಗುರುತಿಸಿ ಅಕ್ಟೋಬರ್ 14 ರಂದು ಉಳ್ಳಾಲ ವಲಯ ಸಮಿತಿಯ ತೀರ್ಮಾನದಂತೆ ಕುತ್ತಾರ್ ಪದವು ಜಂಕ್ಷನಿಂದ ಪಕ್ಷದ ನೂರಾರು ಸಂಗಾತಿಗಳು ಮತ್ತು ಹಿತೈಷಿಗಳು, ನಾಗರಿಕರು ಕೂಡಿ, ಸಂತೋಷ್ ನಗರ, ರಾಣಿಪುರ ಮಾರ್ಗವಾಗಿ ಮೆರವಣಿಗೆ ಹೋಗಿ ಮುನ್ನೂರು ಗ್ರಾಮ ಪಂಚಾಯತ್‌ಗೆ ಮುತ್ತಿಗೆ ಹಾಕಲಾಯಿತು. ಮೆರವಣಿಗೆಯುದ್ದಕ್ಕೂ, ಸರ್ವರಿಗೂ ಆಹಾರ, ಸರ್ವರಿಗೂ ಉದ್ಯೋಗ, ಭೂಹೀನರಿಗೆ ಭೂಮಿ ಸಿಗಲೇಬೇಕು ಎಂಬ ಘೋಷಣೆಯೊಂದಿಗೆ, ಸ್ಥಳೀಯ ಸಮಸ್ಯೆಗಳಾದ ಕುಡಿಯುವ ನೀರಿನ ಯೋಜನೆ, ದಾರಿದೀಪಗಳ ಸಮರ್ಪಕ ನಿರ್ವಹಣೆ, ಕೆಟ್ಟ ರಸ್ತೆಗಳ ದುರಸ್ತಿ ಮಾಡಬೇಕು, ಆಕ್ರಮಣ ಜಾಗ ಸಕ್ರಮೀಕರಣಗೊಳಿಸಬೇಕು, ಸರಕಾರಿ ಜಾಗದಲ್ಲಿ ಮನೆ ಕಟ್ಟಿ ವಾಸ ಮಾಡುವವರಿಗೆ ಹಕ್ಕುಪತ್ರ ನೀಡಬೇಕು. ರೈತ, ಕೃಷಿ ಕಾರ್ಮಿಕರ ಸಮಸ್ಯೆಗಳಾದ ನೀರು ಹರಿಯುವ ಹಳ್ಳದ ಹೂಳು ತೆಗೆಯಬೇಕು, ಮುಂತಾದ ಹಲವಾರು ಬೇಡಿಕೆಗಳನ್ನು ಪಂಚಾಯತ್ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಗಮನಕ್ಕೆ ತರಲಾಯಿತು. ಹಲವಾರು ವರ್ಷಗಳಿಂದ, ಕುತ್ತಾರ್ ತೇವುಳ ರಸ್ತೆಗೆ, ಡಾಂಬರೀಕರಣ ಮಾಡದೇ, ಕಾಂಗ್ರೆಸ್, ಬಿಜೆಬಿ ಪಕ್ಷಗಳು ರಾಜಕೀಯ ಮಾಡುವುದನ್ನು ಖಂಡಿಸಲಾಯಿತು. ಈ ಸಭೆಯನ್ನು ಉದ್ದೇಶಿಸಿ ಉಳ್ಳಾಲ ವಲಯ ಸಮಿತಿ ಕಾರ್ಯದರ್ಶಿ, ರಾಜ್ಯ ಸಮಿತಿ ಸದಸ್ಯ ರಾಮಚಂದ್ರ ಉಚ್ಚಿಲ್ ಮಾತನಾಡಿದರು. ಸಿಪಿಐ(ಎಂ) ಪಕ್ಷದ ದ.ಕ. ಜಿಲ್ಲಾ ಸಮಿತಿ ಸದಸ್ಯ ಕೆ.ಕೃಷ್ಣಪ್ಪ ಸಾಲಿಯಾನ್, ಸ್ಥಳೀಯ ಸಮಸ್ಯೆಗಳ ಬಗ್ಗೆ ಮಾತನಾಡಿದರು. ಉಳ್ಳಾಲ ವಲಯ ಸಮಿತಿ ಸದಸ್ಯ, ಕೆ. ವಿಶ್ವನಾಥ ತೇವುಳ ಸ್ವಾಗತಿಸಿದರು. ಸಮಿತಿ ಸದಸ್ಯೆ ಕೆ.ಪದ್ಮಾವತಿ ಕೋಟೆಕಾರ್ ಬೀಡಿ ಲೇಬರ್ಸ್ ಯೂನಿಯನ್ ಕಾರ್ಯದರ್ಶಿ ಮಂಜಪ್ಪ ಉಪಸ್ಥಿತರಿದ್ದರು. ಮುನ್ನೂರು ಗ್ರಾಮ ಪಂಚಾಯತ್ ಸಿಪಿಐ(ಎಂ) ಪಕ್ಷದ ಸದಸ್ಯರುಗಳಾದ ಕೆ.ಗಣೇಶ ಟೈಲರ್, ಉಮಾವತಿ ಮತ್ತು ಸುಮತಿ ಈ ಕಾರ್ಯಕ್ರಮದಲ್ಲಿದ್ದರು, ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷರಾದ ಕೆ.ಶರೇಂದ್ರ ಕುಕ್ಯಾನ್, ಕಾರ್ಯದರ್ಶಿ ಯು.ಜಯಂತ್ ನಾಯ್ಕ್, ಉಪಾಧ್ಯಕ್ಷರಾದ ಕೆ.ಜನಾರ್ಧನ ರವರು ಭಾಗವಹಿಸಿದ್ದರು. ಯು.ಜಯಂತನಾಯ್ಕ್ ಧನ್ಯವಾದ ಅರ್ಪಿಸಿದರು.



ಇರಾಕಿನ ಮೇಲೆ ದುರಾಕ್ರಮಣ ಮಾಡಿದ ಸಾಮ್ರಾಜ್ಯಶಾಹಿ ದೇಶಗಳ ನಿಯಂತ್ರಣದಲ್ಲಿರುವ ವಿಶ್ವಸಂಸ್ಥೆಯ ಮಾಜಿ ಅಧಿಕಾರಿ ವೋಲ್ಕರ್ ನೇತೃತ್ವದ ಸಮಿತಿಯು ವಿಶ್ವಸಂಸ್ಥೆಯ 'ಆಹಾರಕ್ಕಾಗಿ ತೈಲ' ಯೋಜನೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಮಾಡಿರುವ ಆರೋಪಗಳ ಬಗ್ಗೆ ಹಲವು ಗುಮಾನಿಗಳಿದ್ದಿವೆ. ಈ ಆರೋಪಗಳ ಬಗ್ಗೆ ನಿಷ್ಪಕ್ಷಪಾತವಾದ ತನಿಖೆ ನಡೆಯುವುದು ಅಗತ್ಯವಾಗಿರುವಾಗಲೇ ತೈಲಕ್ಕಾಗಿ ರಕ್ತ ಹರಿಸುವ ಯುದ್ಧಕೋರ ಶಕ್ತಿಗಳ ಪಿತೂರಿಗಳ ಬಗ್ಗೆಯೂ ಎಚ್ಚರ ಅಗತ್ಯವಾಗಿದೆ. ಒಟ್ಟು ಈ ವಿದ್ಯಮಾನಗಳ ಕುರಿತು ಬರೆದಿದ್ದಾರೆ ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಪ್ರಕಾಶ್ ಕಾರಟ್

ವೋಲ್ಕರ್ ಸಮಿತಿಯ ಪರದೆ ಹರಿಯಬೇಕು

ಇರಾಕಿ ಜನತೆಯ ರಕ್ಷಣೆ ಅಪರಾಧವಲ್ಲ

ಪ್ರಕಾಶ್ ಕಾರಟ್

ಭಾರತದಲ್ಲಿ ಒಂದು ಪ್ರಮುಖ ರಾಜಕೀಯ ವಿವಾದ ಸೃಷ್ಟಿಸಿರುವ ವೋಲ್ಕರ್ ಸಮಿತಿಯ ವರದಿ ಇರಾಕ್ ಮತ್ತು ಅದರ ಮೇಲೆ ವಿಶ್ವಸಂಸ್ಥೆಯ ನಿರ್ಬಂಧದ ಕ್ರಮವನ್ನು ಮತ್ತೆ ರಂಗದ ಮೇಲೆ ತಂದಿದೆ. ಇದನ್ನು ಒತ್ತಿ ಹೇಳಬೇಕಾಗಿದೆ. ಇರಾಕಿನ ಮೇಲೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ 1990 ರಲ್ಲಿ ಅಮೆರಿಕಾದ ನೇತೃತ್ವದ ಮಿತ್ರಕೂಟದ ಮೊದಲ ಧಾಳಿಯ ಮೊದಲು ಹೇರಿದ ನಿರ್ಬಂಧ ಮಾರ್ಚ್ 2003 ರಲ್ಲಿ ಅಮೆರಿಕಾ-ಬ್ರಿಟನ್ ಅತಿಕ್ರಮಣದವರೆಗೂ ಮುಂದುವರೆಯಿತು. ಒಂದು ಸಾರ್ವಭೌಮ ದೇಶದ ಮೇಲೆ ಹೇರಿದ ಅತ್ಯಂತ ಕ್ರೂರ ನಿರ್ಬಂಧ ಇದು. ಇರಾಕ್ ತನ್ನ ತೈಲವನ್ನು ಮಾರುವಂತಿರಲಿಲ್ಲ, ಔಷಧಿ ಮತ್ತಿತರ ಅಗತ್ಯ ವಸ್ತುಗಳನ್ನು ಖರೀದಿಸುವಂತಿರಲಿಲ್ಲ. ಈ ನಡುವೆ ಅಮೆರಿಕನ್, ಬ್ರಿಟಿಶ್ ವಿಮಾನ ಪಡೆಗಳ ಸತತ ಬಾಂಬು ಧಾಳಿಗಳು.

ಈ ನಿರ್ಬಂಧದ ಭಯಾನಕ ಪರಿಣಾಮಗಳ ದಾಖಲೆಗಳು ಬಹಳಷ್ಟಿವೆ. 15 ಲಕ್ಷಕ್ಕಿಂತಲೂ ಹೆಚ್ಚು ಇರಾಕಿಗಳು ಇದರಿಂದಾಗಿ ಸತ್ತರು. ಇದು ಅತಿ ಹೆಚ್ಚು ತಟ್ಟಿದ್ದು ಮಕ್ಕಳನ್ನು. 1991 ರಿಂದ 1998 ರ ನಡುವೆ 5 ಲಕ್ಷ ಮಕ್ಕಳು ಅನಗತ್ಯವಾಗಿ ಸತ್ತರು ಎಂದು ಯುನಿಸೆಫ್ ಅಧ್ಯಯನವೇ ಹೇಳಿದೆ. 1989 ರಿಂದ 1999ರ ನಡುವೆ ಐದು ವರ್ಷಗಳ ಕೆಳಗಿನ ಮಕ್ಕಳ ಸಾವಿನ ಸಂಖ್ಯೆ ಹತ್ತು ಪಟ್ಟು ಹೆಚ್ಚಿತು. 1990 ರಿಂದ ನವೆಂಬರ್ 1999 ರ ನಡುವೆ 5,02,292 ಮಕ್ಕಳು ಅತಿಸಾರ, ಕರುಳುಬೇನೆ, ಶ್ವಾಸೋಚ್ಛ್ವಾಸದ ತೊಂದರೆಗಳು ಹಾಗೂ ಕುಪೋಷಣೆಯಿಂದ ಸತ್ತರು.

ನಿರ್ಬಂಧವೂ ಒಂದು ಅಸ್ತ್ರವಾಗಿತ್ತು

ಈ ನಿರ್ಬಂಧಗಳನ್ನು ಹೇರಿದ್ದು ಕುವೈತನ್ನು ಇರಾಕ್ ಅತಿಕ್ರಮಿಸಿದ್ದಕ್ಕಾಗಿ ಅಲ್ಲ ಎಂಬುದು ಅಧ್ಯಕ್ಷ ಜಾರ್ಜ್ ಬುಶ್(ಈಗಿನ ಅಧ್ಯಕ್ಷರ ತಂದೆ) ರ ಹೇಳಿಕೆಯಿಂದಲೇ ಸ್ಪಷ್ಟವಾಗುತ್ತದೆ. "ನನ್ನ ಅಭಿಪ್ರಾಯದಲ್ಲಿ ಸದ್ದಾಂ ಹುಸೇನ್ ಅಧಿಕಾರದಲ್ಲಿ ಇರುವವರೆಗೂ ನಿರ್ಬಂಧಗಳನ್ನು ತೆಗೆಯಬಾರದು" ಎಂದು ಅವರು ಹೇಳಿದ್ದರು. ಅಂದರೆ ಈ ನಿರ್ಬಂಧಗಳ ಉದ್ದೇಶ ಸ್ಪಷ್ಟ. ಇರಾಕ್ ತನ್ನ ಆಡಳಿತವನ್ನು ಬದಲಿಸುವಂತೆ ಮಾಡಲು ಇದೊಂದು ಅಸ್ತ್ರ ಅಷ್ಟೆ.

ಆದರೆ ಇರಾಕೀ ಜನತೆಯ ಸಂಕಟಗಳನ್ನು ಕಂಡು ವಿಶ್ವಾದ್ಯಂತ ರೋಷ ಉಕ್ಕಿ ಬಂದುದರ ಪರಿಣಾಮವಾಗಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಏಪ್ರಿಲ್ 1995 ರಲ್ಲಿ ಇರಾಕಿನ ತೈಲವನ್ನು ಮಾರಿ ಅದಕ್ಕೆ ಪ್ರತಿಯಾಗಿ ಮಾನವೀಯ ದೃಷ್ಟಿಯಿಂದ ಸರಕುಗಳನ್ನು ಖರೀದಿಸುವ ಅವಕಾಶ ನೀಡುವ ಒಂದು ನಿರ್ಣಯವನ್ನು ಅಂಗೀಕರಿಸಿತು. ಈ 'ಆಹಾರಕ್ಕಾಗಿ ತೈಲ ಕಾರ್ಯಕ್ರಮ' (OFFP) ವಾಸ್ತವವಾಗಿ ಜಾರಿಗೆ ಬಂದದ್ದು ಡಿಸೆಂಬರ್ 1996 ರಲ್ಲಿ. ಇರಾಕ್ ಕುರಿತ ವಿಶ್ವಸಂಸ್ಥೆಯ ಕಚೇರಿ ಪ್ರತಿ ಆರು ತಿಂಗಳಿಗೊಮ್ಮೆ ಎಷ್ಟು ತೈಲ ಮಾರಬಹುದು ಎಂದು ನಿರ್ಧರಿಸುತ್ತದೆ. ಅದರಿಂದ ಬಂದ ಹಣದ ಮೂರನೇ ಎರಡರಷ್ಟು ಮೌಲ್ಯದ ಹಣವನ್ನು ಇರಾಕಿನ ಮಾನವೀಯ ಅಗತ್ಯಗಳನ್ನು ಪೂರೈಸಲು ಬಳಸಬಹುದು. ಈ OFFP ನಿಧಿ ಸಂಪೂರ್ಣವಾಗಿ ಇರಾಕಿ ಜನಗಳದ್ದು. ಅದರಲ್ಲಿ ವಿದೇಶಿ ಹಣ ಏನೇನೂ ಇರಲಿಲ್ಲ. ಇರಾಕೀ ತೈಲ ಮಾರಾಟದಿಂದ ಬಂದ ಹಣ ಇರಾಕೀ ಸರ್ಕಾರಕ್ಕೆ ಹೋಗುತ್ತಿರಲಿಲ್ಲ, ಬದಲಿಗೆ ವಿಶ್ವಸಂಸ್ಥೆ ನಿಗದಿಪಡಿಸಿದ ಖಾತೆಗೆ ಹೋಗುತ್ತಿತ್ತು. ಅಲ್ಲದೆ ಅಮೆರಿಕಾ ಮತ್ತು ಅವರ ಮಿತ್ರರು 1991 ರ ಯುದ್ಧದ ಖರ್ಚನ್ನು ಇದರಿಂದಲೇ ವಸೂಲಿ ಮಾಡಿದರು. ಈ ಅವಧಿಯಲ್ಲಿ ಇರಾಕೀ ತೈಲ ಮಾರಾಟದಿಂದ ಬಂದ 65 ಶತಕೋಟಿ ಡಾಲರುಗಳಲ್ಲಿ OFFP ನಿಧಿಗೆ ಹೋದದ್ದು 46 ಶತಕೋಟಿ ಡಾಲರುಗಳು ಮಾತ್ರ.

ಈ ನಿಧಿ ಇರಾಕೀ ಜನತೆಗೆ ಒಂದು ತೆಳ್ಳಗಿನ ಜೀವನರೇಖೆಯಾಗಿತ್ತು. 1998 ರಲ್ಲಿ ಈ ಕಾರ್ಯಕ್ರಮದ ಶರತ್ತುಗಳನ್ನು ಸಡಿಲಗೊಳಿಸಿ ಹೆಚ್ಚು ತೈಲ ಮಾರಾಟಕ್ಕೆ ಅವಕಾಶ ನೀಡಲಾಯಿತು. 1999 ರಲ್ಲಿ ತೈಲ ರಫ್ತಿನ ಮೇಲಿನ ಮಿತಿಯನ್ನು ತೆಗೆಯಲಾಯಿತು. ಆದರೆ ಇರಾಕ್ ಮಾನವೀಯ ಅಗತ್ಯದ ಸರಕುಗಳನ್ನು ಖರೀದಿಸುವ ಪ್ರತಿಯೊಂದು ಕಾಂಟ್ರಾಕ್ಟಿಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸದಸ್ಯರ ಸಮಿತಿ ಮಂಜೂರಾತಿ ನೀಡಬೇಕಾಗಿತ್ತು.


ವಿಶ್ವಸಂಸ್ಥೆಯ ಮೇಲೆ ಗುರಿ

ಈ OFFP ಇರಾಕೀ ಜನತೆಯ ಸಂಕಟಗಳಿಗೆ ಅಲ್ಪ ಪರಿಹಾರವನ್ನಷ್ಟೇ ನೀಡಿದರೂ ಅಮೆರಿಕಾದ ಬಲಪಂಥೀಯ ವಲಯಗಳು ಇದಕ್ಕೂ ವಿರುದ್ಧವಾಗಿದ್ದವು. ಅವರು ವಿಶ್ವಸಂಸ್ಥೆಯ ಮೇಲೆ ಗುರಿಯಿಟ್ಟು ಈ ಕಾರ್ಯಕ್ರಮವನ್ನು ರದ್ದುಪಡಿಸುವಂತೆ ಆಗ್ರಹಿಸಿದರು. ಈ ಕಾರ್ಯಕ್ರಮದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆಪಾದಿಸಿದರು. ಸದ್ದಾಂಹುಸೇನ್ ಈ ಕಾರ್ಯಕ್ರಮದಿಂದ 20 ಶತಕೋಟಿ ಡಾಲರ್‌ನಷ್ಟು ಹಣ ಮಾಡಿಕೊಂಡಿದ್ದಾರೆ ಎಂದರು. ಈ ತೈಲ ವ್ಯಾಪಾರದಿಂದ ಅತಿಹೆಚ್ಚು (4.5 ಶತಕೋಟಿ ಡಾಲರು) ಲಾಭಗಳಿಸುವಂತೆ ತನ್ನ ನೆಚ್ಚಿನ ಮಿತ್ರ ಜೋರ್ಡಾನ್‌ಗೆ ಇದೇ ಅಮೆರಿಕಾ ನೆರವಾಯಿತು ಎಂಬುದು ಬೇರೆ ಮಾತು.

ಸದ್ದಾಂ ಹುಸೇನ್ ಸರ್ಕಾರ ಈ ನಿರ್ಬಂಧಗಳನ್ನು ಸೋಲಿಸಲು, ಅವುಗಳ ಅವಹೇಳನಕಾರಿ ಶರತ್ತುಗಳಿಂದ ತಪ್ಪಿಸಿಕೊಳ್ಳಲು ವಿವಿಧ ವಿಧಾನಗಳನ್ನು ಅನುಸರಿಸಿತು. ಇರಾಕ್‌ನೊಡನೆ ಒಳ್ಳೆಯ ಸಂಬಂಧಗಳಿದ್ದ ದೇಶಗಳನ್ನು, ಸಂಘಟನೆಗಳನ್ನು ಸಂಪರ್ಕಿಸಿ ಅವುಗಳೊಡನೆ ಸಹಕರಿಸಲು ಅದು ಸಿದ್ಧವಾಯಿತು. ಇದರಿಂದ ತೈಲ ಕಾಂಟ್ರಾಕ್ಟ್‌ಗಳು ಹಾಗೂ ಇರಾಕಿಗೆ ಬೇಕಾದ ಸರಕುಗಳ ಕಾಂಟ್ರಾಕ್ಟ್‌ಗಳು ಇಂತಹ ದೇಶಗಳಿಗೆ ಸಿಕ್ಕಿದುದರಲ್ಲಿ ಆಶ್ಚರ್ಯವೇನೂ ಇಲ್ಲ.

ಇರಾಕಿ ಸರ್ಕಾರ ತೈಲ ಕಾಂಟ್ರಾಕ್ಟುಗಳ ಮೇಲೆ ಅಧಿಕ ತೆರಿಗೆ (ಸರ್ಚಾರ್ಜ್) ಹಾಕಿ ಹಾಗೂ ತನಗೆ ಪೂರೈಸಿದ ಸರಕುಗಳ ಮೇಲೆ ಆಂತರಿಕ ಸಾಗಾಣಿಕೆ ಕರ ಹಾಗೂ ಮಾರಾಟ ನಂತರದ ಕರ ಹಾಕಿ ಆದಾಯ ಸಂಗ್ರಹಿಸಲು ಪ್ರಯತ್ನಿಸಿತು. ಇರಾಕಿಗೆ ಇದನ್ನು ಮಾಡುವ ಎಲ್ಲಾ ಹಕ್ಕೂ ಇದೆ ಎಂದು ನಿರ್ಬಂಧಗಳನ್ನು ವಿರೋಧಿಸುವವರು ಹೇಳಿದರೆ, ಇರಾಕೀ ಸಾರ್ವಭೌಮತೆಯ ಮೇಲೆ ಮತ್ತು ಅಲ್ಲಿಯ ಜನತೆಯ ಮೇಲೆ ಧಾಳಿಯನ್ನು ಬೆಂಬಲಿಸಿದವರಿಗೆ ಇದು 'ಲಂಚ' ವೆಂದು ಕಾಣಬಂತು. ವೋಲ್ಕರ್ ಸಮಿತಿ ಇಂತವರಲ್ಲಿ ಒಂದು. ಇರಾಕೀ ಜನತೆ ಹಾಗೂ ಪ್ರಭುತ್ವದ ಮೇಲಿನ ಆರ್ಥಿಕ ಯುದ್ಧವನ್ನು ವಾಶಿಂಗ್ಟನ್ ಹೇಡಿ ಸಮರ್ಥಕರಷ್ಟೇ ಸಮರ್ಥಿಸಿಕೊಳ್ಳಲು ಸಾಧ್ಯ. ಸಿಪಿಐ(ಎಂ) ಮತ್ತು ದೇಶದ ಎಲ್ಲಾ ಪ್ರಗತಿಪರ ಶಕ್ತಿಗಳು ನಿರ್ಬಂಧಗಳನ್ನು ವಿರೋಧಿಸಿದವು, ತನ್ನ ಸಂಪನ್ಮೂಲಗಳ ಮೇಲೆ ಹತೋಟಿ ಹೊಂದುವ ಹಕ್ಕು ಇರಾಕಿಗೆ ಇದೆ ಎಂದು ಬೆಂಬಲಿಸಿದವು.

2003 ರಲ್ಲಿ ಇರಾಕಿನ ಅತಿಕ್ರಮಣದ ನಂತರ ವಿಶ್ವಸಂಸ್ಥೆಯ ಮೇಲೆ ಈ ಕಾರ್ಯಕ್ರಮದ ಕುರಿತು ಧಾಳಿಗಳ ಪ್ರವಾಹವೇ ಹರಿಯಿತು. ಕೋಫಿ ಅನ್ನನ್ ಮತ್ತು ಬುತ್ರೊಸ್ ಘಲಿಯವರನ್ನೂ ಆಪಾದನೆಯ ವ್ಯಾಪ್ತಿಯೊಳಗೆ ತರುವ ಪ್ರಯತ್ನ ನಡೆಯಿತು. ಇದರ ಪರಿಣಾಮವಾಗಿಯೇ OFFP ಯಲ್ಲಿನ ಭ್ರಷ್ಟಾಚಾರ, ತಪ್ಪು ಆಚರಣೆಗಳ ತನಿಖೆಗೆಂದು ಮೂವರು ಸದಸ್ಯರ ವೋಲ್ಕರ್ ಸಮಿತಿ ರಚನೆಗೊಂಡಿತು. OFFP ಯಲ್ಲಿ ಭ್ರಷ್ಟಾಚಾರ ನಡೆದಿದೆಯೆನ್ನುವವರು ಅಮೆರಿಕಾ- ಬ್ರಿಟನ್‌ನ ಅತಿಕ್ರಮಣದ ನಂತರ ಅಮೆರಿಕನ್ ಕಂಪನಿಗಳು ಪುನರ್ರಚನಾ ಕಾರ್ಯಕ್ರಮದ ಹೆಸರಿನಲ್ಲಿ ನಡೆಸಿದ ಲೂಟಿಯ ಬಗ್ಗೆ ಚಕಾರವೆತ್ತುವುದಿಲ್ಲ. ವಾಸ್ತವವಾಗಿ



ಇದೊಂದು ಅಗಾಧ ಪ್ರಮಾಣದ ಹಗರಣ. ಇದರ ತನಿಖೆ ನಡೆಸುವ ಧೈರ್ಯವನ್ನು ವಿಶ್ವಸಂಸ್ಥೆ ಮಾಡಲಾರದು.

ಈ ನಿರ್ಬಂಧಗಳನ್ನು ಹಾಗೂ ಇರಾಕ್ ಯುದ್ಧವನ್ನು ವಿರೋಧಿಸಿ ಇರಾಕನ್ನು ಬೆಂಬಲಿಸಿದವರೆಲ್ಲರ ಪ್ರತಿಷ್ಠೆ ಕೆಡಿಸಲು ಅಮೆರಿಕಾ ಮತ್ತು ಬ್ರಿಟಿಷ್ ಸರ್ಕಾರಗಳು ತುದಿಗಾಲ ಮೇಲೆ ನಿಂತಿವೆ. ಬ್ರಿಟನ್ನಿನ ಲೇಬರ್ ಸರ್ಕಾರದ ಹೀನ ಪಾತ್ರವನ್ನು ವಿರೋಧಿಸಿದ ಬ್ರಿಟಿಶ್ ಸಂಸತ್ ಸದಸ್ಯ ಜಾರ್ಜ್ ಗೆಲೊವೇ ಮೇಲೆ ಸದ್ದಾಂ ಹುಸೇನ್‌ರಿಂದ ತೈಲ ಮತ್ತು ಹಣವನ್ನು ಪಡೆದರೆಂಬ ಆಪಾದನೆ ಹಾಕಲಾಯಿತು. ನಂತರ ಇರಾಕೀ ಮೂಲಗಳಿಂದ ಸಂಗ್ರಹಿಸಿದ ದಸ್ತಾವೇಜುಗಳು ಫೋರ್ಜರಿಗಳು ಎಂದು ಸಿದ್ಧವಾಯಿತು. ಡೈಲಿ ಟೆಲಿಗ್ರಾಫ್ ಮತ್ತು ಮತ್ತಿತರ ಪತ್ರಿಕೆಗಳು ಮಾನನಷ್ಟ ತುಂಬಿಕೊಡಬೇಕಾಯಿತು. ಇದನ್ನು ಗಮನಿಸಬೇಕು.

ವೋಲ್ಕರ್ ಸಮಿತಿಯ ವರದಿಯನ್ನು ಅದು ಇದ್ದಂತೆ ಒಪ್ಪಿಕೊಳ್ಳುವುದು ಸಾಧ್ಯವಿಲ್ಲ. ರಷ್ಯ ಮತ್ತು ದಕ್ಷಿಣ ಆಫ್ರಿಕಾ ಅಧಿಕೃತವಾಗಿಯೇ ಈ ವರದಿ ಆಧರಿಸಿದ ದಸ್ತಾವೇಜುಗಳು ಮತ್ತು ಅದರ ಟಿಪ್ಪಣಿಗಳು ಮೌಲಿಕವಲ್ಲ ಎಂದು ಹೇಳಿವೆ. ರಷ್ಯನ್ ವಿದೇಶಾಂಗ ಮಂತ್ರಿ ಸಮಿತಿ ರಷ್ಯನ್ ಸರ್ಕಾರಕ್ಕೆ ನೀಡಿದ ಕೆಲವು ದಸ್ತಾವೇಜುಗಳು ಫೋರ್ಜರಿಗಳೆಂದು ಹೇಳಿದರು. ಇರಾಕಿನ ವಿಶ್ವಸಂಸ್ಥೆ ಕಚೇರಿಯ ಮೂಲಕ ವ್ಯವಹಾರ ನಡೆಸಿದ ಭಾರತೀಯ ಕಂಪನಿಗಳು ಯಾವುದೇ ತಪ್ಪು ಮಾಡಿವೆ ಎಂದು ಕಾನೂನು ಪ್ರಕಾರ ಆಪಾದಿಸುವಂತಿಲ್ಲ, ಏಕೆಂದರೆ ಅವರು ಒಂದು ಸಾರ್ವಭೌಮ ಸರ್ಕಾರ ತೆರಬೇಕು ಎಂದು ಹೇಳಿದ್ದನ್ನು ತೆತ್ತಿವೆಯಷ್ಟೆ. ಇವನ್ನೆಲ್ಲಾ 'ಲಂಚ'ಎನ್ನಲು ಸಾಧ್ಯವೇ? ಇದರಲ್ಲಿ ತೈಲ ಗುತ್ತಿಗೆಗಳಲ್ಲಿ ಕೆಲವು ಆಪಾದನೆಗಳಿವೆ, ಅವುಗಳ ತನಿಖೆ ನಡೆಸಬೇಕು.

ಕಾಂಗ್ರೆಸ್ ಕಸಿವಿಸಿ ಪಡಬೇಕಾಗಿಲ್ಲ

ಈ ವರದಿಯ ಅನುಬಂಧದಲ್ಲಿ ನಟ್ವರ್ ಸಿಂಗ್ ಮತ್ತು ಕಾಂಗ್ರೆಸ್ ಪಕ್ಷದ ಪ್ರಸ್ತಾವ ಬೇರೆ ವಿಧಕ್ಕೆ ಸೇರಿದ್ದು. ಅಖಿಲ ಭಾರತ ಕಾಂಗ್ರೆಸ್ ಸಮಿತಿ ನಿರ್ಬಂಧ ಹೇರಿದ್ದ ಅವಧಿಯಲ್ಲಿ ಇರಾಕ್ ಸರ್ಕಾರದೊಡನೆ ಹಾಗೂ ಅಲ್ಲಿನ ಬಾತಿಸ್ಟ್ ಪಕ್ಷದೊಂದಿಗೆ ಸಂಬಂಧಗಳನ್ನು ಹೊಂದಿತ್ತು. ನಟ್ವರ್ ಸಿಂಗ್ ಅದರ ವಿದೇಶ ಸಂಬಂಧಗಳ ವಿಭಾಗದ ಮುಖ್ಯಸ್ಥರಾಗಿದ್ದರು. ಇರಾಕ್ ಮತ್ತು ಇತರ ಮೂರನೇ ಜಗತ್ತಿನ ದೇಶಗಳೊಂದಿಗೆ ಮತ್ತು ಅಲ್ಲಿನ ರಾಷ್ಟ್ರೀಯ ಸಾರ್ವಭೌಮತೆಯ ರಕ್ಷಣೆಯ ಆಶಯ ಹೊಂದಿರುವ ಸಂಘಟನೆಗಳೊಂದಿಗೆ ಸಂಬಂಧಗಳ ಬಗ್ಗೆ ಕಾಂಗ್ರೆಸ್ ಪಕ್ಷ ನಾಚಿಕೆಪಟ್ಟುಕೊಳ್ಳುವ ಅಗತ್ಯವೇನೂ ಇಲ್ಲ. ಯುಪಿಎ ಸರ್ಕಾರದ ಮೇಲೆ ಬಿಜೆಪಿಯ ಮತ್ತು ಬಲಪಂಥೀಯ ಮಾಧ್ಯಮಗಳ ಟೀಕೆಗಳ ಬಹುಪಾಲು ಬಂದಿರುವುದು ಅವುಗಳು ಅಮೆರಿಕಾ ಮತ್ತು ಅದರ ಪಶ್ಚಿಮ ಏಷ್ಯಾ ನೀತಿಯೊಂದಿಗೆ ಸೈದ್ಧಾಂತಿಕ ನಿಕಟತೆ ಹೊಂದಿರುವ ಕಾರಣದಿಂದಾಗಿ. ನಮ್ಮಲ್ಲಿನ ಮಾಧ್ಯಮಗಳು ಈ ಬಗ್ಗೆ ಹೇಳುವಂತದ್ದೆಲ್ಲಾ ನೇರವಾಗಿ ಪಾಶ್ಚಿಮಾತ್ಯ ಮಾಧ್ಯಮಗಳಿಂದ ಎತ್ತಿಕೊಂಡದ್ದು.

ದುರದೃಷ್ಟವಶಾತ್ ಮನಮೋಹನ ಸಿಂಗ್ ಸರ್ಕಾರ ಈಗ ಅಮೆರಿಕಾದ ಮೇಲೆ ಹೆಚ್ಚೆಚ್ಚು ಅವಲಂಬಿಸುತ್ತಿರುವುದರಿಂದಾಗಿ, ಅವರೊಡನೆ ಕೈಜೋಡಿಸಲು ಬಯಸುವುದರಿಂದಾಗಿ ತನ್ನ ಈ ಇತಿಹಾಸವನ್ನು ನೆನಪಿಸಿಕೊಳ್ಳಲು ಇಷ್ಟಪಡುತ್ತಿಲ್ಲ. ಅಮೆರಿಕಾ ತನ್ನ ಯಜಮಾನಿಕೆಯ ಅಭಿಪ್ರಾಯಗಳನ್ನು ಒಪ್ಪದ ವ್ಯಕ್ತಿಗಳು ಹಾಗೂ ಸಂಘಟನೆಗಳನ್ನು ಗುರಿಮಾಡಲು ಯತ್ನಿಸುತ್ತಿದೆ ಎಂಬ ನಟ್ವರ್ ಸಿಂಗ್ ಮಾತಿನಿಂದ ಯುಪಿಎ ಸರ್ಕಾರಕ್ಕೆ ಕಸಿವಿಸಿಯಾಗಬಹುದು.

ಸಿಪಿಐ(ಎಂ) ನಿಲುವು

ಸಿಪಿಐ(ಎಂ) ತನ್ನ ನಿಲುವನ್ನು ಪ್ರಕಟಪಡಿಸಿದೆ. ವೋಲ್ಕರ್ ಸಮಿತಿಯ ವರದಿಯಲ್ಲಿ ವಿದೇಶಾಂಗ ಮಂತ್ರಿ, ಕಾಂಗ್ರೆಸ್ ಪಕ್ಷ ಹಾಗೂ ಹಲವು ಭಾರತೀಯ ಕಂಪನಿಗಳ ಬಗ್ಗೆ ಮಾಡಿರುವ ಆಪಾದನೆಗಳ ತನಿಖೆಗಳ ನಂತರವೇ ತೀರ್ಮಾನಕ್ಕೆ ಬರಲು ಸಾಧ್ಯ, ಇದು ರಾಜಕೀಯ ಕೃಪಾಪೋಷಣೆಯಿಂದ ಮಾಡಿದ ಕಾನೂನುಬಾಹಿರ ವ್ಯವಹಾರಗಳೇ ಅಥವಾ ಬೇರೆ ಕಾಂಟ್ರಾಕ್ಟ್‌ಗಳಂತೆ ಸಾಮಾನ್ಯ ವ್ಯವಹಾರಗಳೇ ಎಂದು ತೀರ್ಮಾನಿಸಲು ಆಗ ಸಾಧ್ಯ. ವೋಲ್ಕರ್ ಸಮಿತಿ ಎಲ್ಲಾ ವ್ಯಕ್ತಿಗಳಿಗೆ, ಸಂಸ್ಥೆಗಳ ಗಮನಕ್ಕೆ ಸಂಬಂಧಪಟ್ಟ ಸಂಗತಿಗಳನ್ನು ತರಲಾಗಿದೆ ಎಂದು ಹೇಳಿಕೊಂಡರೂ ಹಾಗೇನೂ ನೋಟಿಸ್ ನೀಡಿಲ್ಲ ಎಂಬುದು ಈಗ ಸ್ಪಷ್ಟವಾಗಿದೆ.

ಸರ್ಕಾರ ಎರಡು ರೀತಿಯ ತನಿಖೆಗಳನ್ನು ಪ್ರಕಟಿಸಿದೆ. ಇದು ಸರಿಯಾದ ಹೆಜ್ಜೆ. ನಟವರ್ ಸಿಂಗ್ ಈ ತನಿಖೆಯ ಅವಧಿಯಲ್ಲಿ

ಪುಟ 12 ಕ್ಕೆ

ಯುನೆಸ್ಕೋ ಸಾಂಸ್ಕೃತಿ ವೈವಿಧ್ಯತೆ ರಕ್ಷಣಾ ಒಡಂಬಡಿಕೆ

ಸ್ವಾಗತಾರ್ಹ ಕ್ರಮ

ಇತ್ತೀಚೆಗೆ ವಿಶ್ವಸಂಸ್ಥೆಯ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘಟನೆ ಯುನೆಸ್ಕೋ "ಸಾಂಸ್ಕೃತಿಕ ಅಭಿವ್ಯಕ್ತಿಗಳ ವೈವಿಧ್ಯತೆಯ ರಕ್ಷಣೆ ಮತ್ತು ಉತ್ತೇಜನೆಯ ಒಡಂಬಡಿಕೆ"ಯನ್ನು ಅನುಮೋದಿಸಿದೆ. ಅಕ್ಟೋಬರ್ ಮೊದಲ ವಾರದಲ್ಲಿ ನಡೆದ ಯುನೆಸ್ಕೋದ 33ನೇ ಮಹಾಮಂಡಳಿ ಸಭೆಯ ವಿವಿಧ ಆಯೋಗಗಳ ಚರ್ಚೆಗಳಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನ ಈ ಒಡಂಬಡಿಕೆಯ ಮೇಲೆ ಚರ್ಚೆಯನ್ನು ಮತ್ತೆ ತೆರೆಯುವಂತೆ ತಿದ್ದುಪಡಿಗಳನ್ನು ತರಲು ಪ್ರಯತ್ನಿಸಿತು. ಆದರೆ ಅದು ಫಲಿಸಲಿಲ್ಲ. ಆಯೋಗಗಳ ಆರಂಭಿಕ ಚರ್ಚೆಗಳಲ್ಲಿ 160 ದೇಶಗಳಲ್ಲಿ 158 ದೇಶಗಳು ಅದರ ತಿದ್ದುಪಡಿಗಳನ್ನು ತಿರಸ್ಕರಿಸಿದವು. ಅಮೆರಿಕಾ ಮತ್ತು ಇಸ್ರೇಲ್ ಅದರ ಪರವಾಗಿ ಮತ ನೀಡಿತು. ಕರ್ಝಾಕ್‌ಸ್ತಾನ್ ಗೈರುಹಾಜರಾಯಿತು. ನಂತರ ಮಹಾ ಮಂಡಳಿಯ ಪ್ಲೀನರಿ ಅಧಿವೇಶನದಲ್ಲೂ 191 ಸದಸ್ಯ ದೇಶಗಳು ಯುನೆಸ್ಕೋ ಒಡಂಬಡಿಕೆಯನ್ನು ಸಮರ್ಥಿಸಿದವು. ಅಮೆರಿಕಾ ಮತ್ತು ಅದರ ನೆಚ್ಚಿನ ಬಂಟ ಇಸ್ರೇಲ್ ಮಾತ್ರ ಒಡಂಬಡಿಕೆಯನ್ನು ವಿರೋಧಿಸಿದವು.

ಈ ಒಡಂಬಡಿಕೆಯನ್ನು ಅಮೆರಿಕಾ ವಿರೋಧಿಸಿದ್ದೇಕೆ? ಒಡಂಬಡಿಕೆಯಿಂದ ಅದಕ್ಕೇನು ನಷ್ಟ? ಅಥವಾ ಅದನ್ನು ವಿರೋಧಿಸುವುದರಿಂದ ಅದಕ್ಕೇನು ಲಾಭ? ಏಕೆಂದರೆ ಅದು ಆಧುನಿಕ ಜಗತ್ತಿನಲ್ಲಿರುವ ಬೇರೆಲ್ಲಾ ವಿಷಯಗಳಂತೆ ಸಂಸ್ಕೃತಿಯನ್ನೂ ಕೂಡಾ ಮಾರುಕಟ್ಟೆಯಲ್ಲಿ ವ್ಯವಹರಿಸಬಹುದಾದ ಒಂದು ಸರಕಾಗಿ ಮಾಡಬಯಸುತ್ತದೆ. ಆಗ ಅದನ್ನು 'ಸಾಂಸ್ಕೃತಿಕ ಉತ್ಪನ್ನಗಳು' ಎಂದು ಹೇಳಿ ಡಬ್ಲ್ಯು.ಟಿ.ಓ.ದ ವ್ಯಾಪಾರ ಮತ್ತು ಸೇವೆಗಳ ವ್ಯಾಪ್ತಿಗೆ ತರಬಹುದು. ಆದ್ದರಿಂದಲೇ ಈ ಪ್ರಯತ್ನ, ಈ ವಿರೋಧ ಎನ್ನುತ್ತಾರೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ. ಅವರು ಯುನೆಸ್ಕೋದ 33ನೇ ಮಹಾಮಂಡಳಿ ಸಭೆಯಲ್ಲಿ ಭಾಗವಹಿಸಿದ ಭಾರತೀಯ ನಿಯೋಗದ ಒಬ್ಬ ಸದಸ್ಯರಾಗಿದ್ದರು.



ಸ್ವತಂತ್ರ ದೇಶಗಳಲ್ಲಿ ಹೆಚ್ಚಿನವು ತಮ್ಮ ಸಾಂಸ್ಕೃತಿಕ ಗುರುತುಗಳನ್ನು ಹಾಗೂ ವೈವಿಧ್ಯತೆಗಳನ್ನು ಅಮೆರಿಕಾದ ಸಾಂಸ್ಕೃತಿಕ ಸಾಮ್ರಾಜ್ಯಶಾಹಿಯ ಧಾಳಿಗಳಿಂದ ರಕ್ಷಿಸಲಿಕ್ಕಾಗಿ ಇಂತಹ ಒಂದು ಒಡಂಬಡಿಕೆಯ ಪರವಾಗಿವೆ ಎಂಬುದು ಸ್ಪಷ್ಟ ಎಂದು ಯೆಚೂರಿ ಹೇಳುತ್ತಾರೆ.

ಸ್ವತಂತ್ರ ದೇಶಗಳ ಈ ಭಯವೂ ಬುಡವಿಲ್ಲದ್ದೇನಲ್ಲ ಎನ್ನುತ್ತಾರೆ ಅವರು. ಜಾಗತೀಕರಣದ ಅಡಿಯಲ್ಲಿ ಆರ್ಥಿಕ ಮತ್ತು ಮಿಲಿಟರಿ ವಲಯಗಳಲ್ಲಿ ಮಾತ್ರವಲ್ಲ ಎಲ್ಲಾ ವಲಯಗಳಲ್ಲೂ ಅಮೆರಿಕಾ ತನ್ನ ಯಜಮಾನಿಕೆ ಬಯಸುತ್ತದೆ. ಅವು ಅದಕ್ಕೆ ಸೂಪರ್ ಲಾಭಗಳಿಕೆಯ ಹೊಸ ದಾರಿಗಳೂ ಆಗಿರಬೇಕು. ಸಾಂಸ್ಕೃತಿಕ ಯಜಮಾನಿಕೆ ಸಾಧಿಸಬೇಕಾದರೆ ಇಡೀ ಜಗತ್ತಿನಲ್ಲಿ ಸಾರ್ವಜನಿಕರ ಅಭಿರುಚಿಗಳು ಒಂದೇ ರೀತಿಯದ್ದಾಗಿರಬೇಕಾಗುತ್ತದೆ. ಆಗ ತನ್ನ 'ಸಾಂಸ್ಕೃತಿಕ ಉತ್ಪನ್ನ'ಗಳನ್ನು ಭಾರೀ ಸಂಖ್ಯೆಯಲ್ಲಿ ಉತ್ಪಾದಿಸುವ ತಂತ್ರಜ್ಞಾನಗಳನ್ನು ಬೆಳೆಸಲು, ಈ ಉತ್ಪನ್ನಗಳನ್ನು ಮಾರಲು ಅದಕ್ಕೆ ಸುಲಭವಾಗುತ್ತದೆ. ಆದ್ದರಿಂದ ಜಾಗತೀಕರಣದೊಂದಿಗೇ ಸಂಸ್ಕೃತಿಯ ವ್ಯಾಪಾರೀಕರಣವೂ ಸಹಜವಾಗಿಯೇ ಬರುತ್ತದೆ ಎನ್ನುತ್ತಾರೆ ಸೀತಾರಾಂ ಯೆಚೂರಿಯವರು. ಭಾರತದಲ್ಲಿ ಇತ್ತೀಚೆಗೆ 'ವೆಲೆಂಟೈನ್ ಡೇ'ಯಂತಹ ಪಾಶ್ಚಿಮಾತ್ಯ ಪರಿಕಲ್ಪನೆಗಳು ನಗರದ ಯುವಜನರ ನಡುವೆ ಇದ್ದಕ್ಕಿದ್ದಂತೆ ಜನಪ್ರಿಯವಾಗುತ್ತಿರುವುದರ ಉದಾಹರಣೆಯನ್ನು ಇದಕ್ಕೆ ಅವರು ಕೊಡುತ್ತಾರೆ. ಈ ದಿನದ ಆಚರಣೆಯೊಂದಿಗೆ ಗ್ರೀಟಿಂಗ್ ಕಾರ್ಡ್‌ಗಳು ಮತ್ತು ಗಿಫ್ಟ್‌ಗಳ ಮಾರಾಟವೂ ವಿಪರೀತವಾಗಿ ಹೆಚ್ಚಿದೆ. ಮೂರನೇ ಜಗತ್ತಿನ ಹೆಚ್ಚಿನ ದೇಶಗಳಲ್ಲಿ ಅನಕ್ಷರತೆ ಎಷ್ಟೇ ಇರಲಿ, ವಾಲ್ಟ್ ಡಿಸ್ನೆಯ ಕಾರ್ಟೂನ್ ಚಿತ್ರಗಳು ಮಾತ್ರ ಮಕ್ಕಳಿಗೆ ಪರಿಚಿತವಾಗಿರುತ್ತವೆ!

ವರ್ಗಪ್ರಾಬಲ್ಯದ ದೃಷ್ಟಿಯಿಂದ ನೋಡಿದರೆ ಇಂತಹ ಸಂಸ್ಕೃತಿ, ಜಾಗತೀಕರಣದ ಈ ಸಂಸ್ಕೃತಿ ಜನಗಳನ್ನು ಅವರ ದೈನಂದಿನ ವಾಸ್ತವತೆಗಳಿಂದ ದೂರ ಸೆಳೆಯುವ ಪ್ರಯತ್ನ ಎಂದು ಸೀತಾರಾಂ ಯೆಚೂರಿಯವರು ಹೇಳುತ್ತಾರೆ. ಇಲ್ಲಿ ಸಂಸ್ಕೃತಿ ಜನಗಳ ಸೌಂದರ್ಯಪ್ರಜ್ಞೆಗೆ ಸಂಬಂಧಪಟ್ಟ ವಿಷಯವಾಗಿರುವುದಿಲ್ಲ. ಬದಲಿಗೆ, ಅವರ ಗಮನವನ್ನು ಬಡತನ, ದಾರಿದ್ರ್ಯದಂತಹ ಸಮಸ್ಯೆಗಳಿಂದ ಬೇರೆಡೆಗೆ ಸೆಳೆಯುವ ಪ್ರಯತ್ನವಾಗುತ್ತದೆ. ಸಂಸ್ಕೃತಿ ಇಲ್ಲಿ ತಮ್ಮ ಶೋಚನೀಯ ಅಸ್ತಿತ್ವವನ್ನು ಉತ್ತಮ ಪಡಿಸಿ ಬದಲಾಯಿಸುವ ಜನಗಳ ಹೋರಾಟಗಳನ್ನು ಛಿದ್ರಗೊಳಿಸಲು ಬಳಸುವ ಸಾಧನವಾಗುತ್ತದೆ. ಈ ದೈತ್ಯ ಕಂಪೆನಿಗಳ ಮಟ್ಟಿಗೆ ಸಂಸ್ಕೃತಿಗೆ ಇರುವುದು ವಿನಿಮಯ ಮೌಲ್ಯ ಮಾತ್ರ. ಅವರು ಬಯಸುವುದು ಸಾಮಾಜಿಕ ಸೃಜನಶೀಲತೆಯಲ್ಲ, ಸಾಮಾಜಿಕ ಹತೋಟಿ ಮಾತ್ರ. ಈ ಉತ್ಪನ್ನಗಳ ಮಾಲಕರ ಸಂಪತ್ತು ಹೆಚ್ಚಿಸುವಂತೆ ಸಾರ್ವಜನಿಕ ಅಭಿರುಚಿಯನ್ನು ಮನರಂಜನೆಯ ಹೆಸರಿನಲ್ಲಿ ಕನಿಷ್ಟ ಮಟ್ಟಕ್ಕೆ ಇಳಿಸಲಾಗುತ್ತದೆ.



ಯೆಚೂರಿ

ಮನರಂಜನಾ ಸಂಸ್ಕೃತಿಯಲ್ಲ, ಉದ್ದಿಮೆ

ಈ 'ಮನರಂಜನಾ' ಸಂಸ್ಕೃತಿ(ನಿಜವಾಗಿ ಇದು ಮನರಂಜನಾ ಉದ್ದಿಮೆ) ನೋಟಕ್ಕೆ ರಾಜಕೀಯಾತೀತ ಎಂದೆನಿಸಿದರೂ ವಾಸ್ತವವಾಗಿ ಅದರಲ್ಲಿ ಆಳುವ ವರ್ಗಗಳ ರಾಜಕೀಯ ತುಂಬಿರುತ್ತದೆ. ಅವು ಪ್ರಚಾರಪಡಿಸುವ ಬಿಂಬಗಳು ತೀವ್ರವಾದ ಲೈಂಗಿಕ, ಜನಾಂಗದ್ವೇಷಿ, ಕೊಳ್ಳುಬಾಕ, ಸರ್ವಾಧಿಕಾರಶಾಹಿ, ಮಿಲಿಟರಿಶಾಹಿ ಹಾಗೂ ಸಾಮ್ರಾಜ್ಯಶಾಹೀ ಸ್ವರೂಪದ್ದು ಎಂದು ಒಂದು ವಿಶ್ಲೇಷಣೆ ಹೇಳುತ್ತದೆ.

ಜಾಗತೀಕರಣದ ಈ ಸಂಸ್ಕೃತಿ ಪಾರಂಪರಿಕ ಸಂಸ್ಕೃತಿಗೆ ವಿರುದ್ಧವಾಗಿದೆ ಎಂದು ಹೇಳಲಾಗದು ಎನ್ನುತ್ತಾರೆ ಸೀತಾರಾಂ ಯೆಚೂರಿ. ವಿಪರೀತ ಲಾಭ ತರುವುದಾದರೆ ಅವರು ಪಾರಂಪರಿಕ ವಿಧಗಳನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಅದನ್ನು ಬಳಸಿ ಸಾರ್ವಜನಿಕ ಅಭಿರುಚಿಗಳು ಒಂದೇ ತೆರನಾಗಿರುವಂತೆ ಮಾಡುತ್ತಾರೆ. ಆಗ ತಂತ್ರಜ್ಞಾನವನ್ನು ಬಳಸಿ ಭಾರೀ ಸಂಖ್ಯೆಯಲ್ಲಿ ಒಂದೇ ಉತ್ಪನ್ನವನ್ನು ತಯಾರಿಸಿ ಮಾರಾಟ ಮಾಡಬಹುದು. ಮನರಂಜನಾ ಉದ್ದಿಮೆ ಮಾಡುವುದು ಇದನ್ನೆ. ಜಾಗತೀಕರಣದ ಸಂಸ್ಕೃತಿ ನಮ್ಮ ಪಾರಂಪರಿಕ ನೃತ್ಯಗಳಾದ ಬಾಂಗ್ಡಾ, ದಾಂಡಿಯಾ ಮುಂತಾಗವುಗಳನ್ನು ಹೇಗೆ ತನ್ನದಾಗಿಸಿಕೊಂಡಿದೆ ಎಂಬುದು ಈಗ ಟಿ.ವಿ.ಯಲ್ಲಿ ಬರುವ ಸಂಗೀತ ಚಾನೆಲ್ ನೋಡಿದರೂ ತಿಳಿಯುತ್ತದೆ ಎಂದು ಯೆಚೂರಿಯವರು ಇದಕ್ಕೆ ಉದಾಹರಣೆ ನೀಡುತ್ತಾರೆ. ಪಾಶ್ಚಿಮಾತ್ಯ ಮಾಧ್ಯಮ ದೊರೆ ರೂಪರ್ಟ್ ಮುರ್ಡೋಕ್ ರಮಾನಂದ ಸಾಗರ್‌ರವರ 'ರಾಮಾಯಣ'ದ ಜಾಗತಿಕ ಹಕ್ಕುಗಳನ್ನು ಪಡೆದಿದ್ದಾರೆ ಎಂಬ ಸಂಗತಿಯತ್ತ ಅವರು ಗಮನ ಸೆಳೆಯುತ್ತಾರೆ.

ಜನರ ಅಭಿರುಚಿಯೇ?

ಇಂತಹ ಸಂಸ್ಕೃತಿಗೆ ನಿಮ್ಮ ವಿರೋಧವೇಕೆ? ಜನ ಬಯಸುವುದರಿಂದ ತಾನೇ ಅವರ ಈ ಸಾಂಸ್ಕೃತಿಕ ಉತ್ಪನ್ನಗಳ ಮಾರಾಟವಾಗುವುದು. ಜನರ ಅಭಿರುಚಿಗೆ ತಕ್ಕುದಾದನ್ನು ಅವರು ಒದಗಿಸುತ್ತಾರೆ, ಅದರಲ್ಲಿ ತಪ್ಪೇನು ಎಂಬುದು ಸಾಮಾನ್ಯವಾಗಿ ಬರುವ ಪ್ರತಿಕ್ರಿಯೆ. ಇದಕ್ಕೆ ಉತ್ತರ ನೀಡುತ್ತಾ ಸೀತಾರಾಂ ಯೆಚೂರಿ ಸುಮಾರು ನೂರೈವತ್ತು ವರ್ಷಗಳ ಹಿಂದೆ ಮಾರ್ಕ್ಸ್ ಮಾಡಿದ ಬಂಡವಾಳಶಾಹಿಯ ಒಂದು ಆಳವಾದ ವಿಶ್ಲೇಷಣೆಯನ್ನು ಉದ್ಧರಿಸುತ್ತಾರೆ. 'ಉತ್ಪಾದನೆ ಒಂದು ಅಗತ್ಯವನ್ನು ಪೂರೈಸುವ ಒಂದು ಪದಾರ್ಥವನ್ನು ಒದಗಿಸುವುದಷ್ಟೇ ಅಲ್ಲ, ಆ ಪದಾರ್ಥದ ಅಗತ್ಯವನ್ನೂ ಒದಗಿಸುತ್ತದೆ. ಒಂದು ಕಲಾಕೃತಿ ಕಲಾಭಿರುಚಿ ಇರುವ, ಸೌಂದರ್ಯವನ್ನು ಸವಿಯಬಲ್ಲ ಸಾರ್ವಜನಿಕರನ್ನು ಸೃಷ್ಟಿಸುತ್ತದೆ. ಇದೇ ಮಾತನ್ನು ಬೇರೆ ಯಾವುದೇ ಉತ್ಪನ್ನದ ಬಗ್ಗೆಯೂ ಹೇಳಬಹುದು. ಅದರ ಪ್ರಕಾರ ಉತ್ಪಾದನೆ ವಿಷಯದ ಒಂದು ವಸ್ತುವನ್ನು ಉತ್ಪಾದಿಸುತ್ತದೆಯಷ್ಟೇ ಅಲ್ಲ, ಆ ವಸ್ತುವಿನ ವಿಷಯವನ್ನೂ ಉತ್ಪಾದಿಸುತ್ತದೆ' ಎಂದು ಕಾರ್ಲ್ ಮಾರ್ಕ್ಸ್ ಹೇಳಿದ್ದರು.

ಇದು ಇಂದು ಸ್ಪಷ್ಟವಾಗಿ ಕಾಣುತ್ತಿದೆ ಎಂದು ಸೀತಾರಾಂ ಯೆಚೂರಿ ಹೇಳುತ್ತಾರೆ. ಪ್ರತಿ ವರ್ಷ ಜಾಹೀರಾತುಗಳಿಗಾಗಿ ಖರ್ಚು ಮಾಡುವ ಕೋಟಿ ಕೋಟಿ ಡಾಲರುಗಳು ಈ ವ್ಯವಸ್ಥೆ ದೊಡ್ಡ ಸಂಖ್ಯೆಯಲ್ಲಿ ಯಾಂತ್ರಿಕವಾಗಿ ಉತ್ಪಾದಿಸುವ 'ವಸ್ತು'ಗಳಿಗೆ 'ವಿಷಯ'ಗಳನ್ನು ಸೃಷ್ಟಿಸುತ್ತವೆ. ಸಂಸ್ಕೃತಿಯಲ್ಲೂ ಹೀಗೆಯೇ. ಭಾರೀ ಜಾಹೀರಾತುಗಳ ಮೂಲಕ ಜನಗಳ ವಿಮರ್ಶಾ ಶಕ್ತಿಯನ್ನು ನಾಶಮಾಡದಿದ್ದರೂ ಮಂದಗೊಳಿಸಿ ಅವರು ಸುಮಾರಾಗಿ ಒಂದೇ ರೀತಿಯ ಅಭಿರುಚಿ ಹೊಂದುವಂತೆ ಮಾಡಲಾಗುತ್ತದೆ. ಈ ಮೂಲಕ ಒಂದು ಸಾಮೂಹಿಕ ಬಳಕೆಯ ಉತ್ಪನ್ನವನ್ನು ಸ್ವೀಕರಿಸಲು ಸಿದ್ಧವಾಗುವ ಒಂದು ಸಮೂಹವನ್ನು ಸೃಷ್ಟಿಸಲಾಗುತ್ತದೆ. ಆದ್ದರಿಂದ 'ಸಂಸ್ಕೃತಿ' ಜನಗಳ ಅಭಿರುಚಿಗೆ ತಕ್ಕುದಾದನ್ನು ಕೊಡುತ್ತಿಲ್ಲ. ಬದಲಾಗಿ ದೈತ್ಯ ಕಂಪನಿಗಳು ದೊಡ್ಡ ಸಂಖ್ಯೆಯಲ್ಲಿ ಉತ್ಪಾದಿಸುವ 'ಸಂಸ್ಕೃತಿ'ಯನ್ನು ಯಾವುದೇ ವಿಮರ್ಶೆಯಿಲ್ಲದೆ ಸ್ವೀಕರಿಸುವ ಅಭಿರುಚಿಯನ್ನು ಸೃಷ್ಟಿಸಲಾಗುತ್ತದೆ.

"ಜಗತ್ತು ಒಂದು ಸರ್ವ ಸಾಮಾನ್ಯ ಭಾಷೆಯತ್ತ ಸಾಗುತ್ತಿದ್ದರೆ ಅದು ಇಂಗ್ಲೀಷ್ ಇರಲಿ; ಜಗತ್ತು ದೂರಸಂಪರ್ಕ, ಸುರಕ್ಷತತೆ, ಸಮಾನ ಗುಣಮಟ್ಟದತ್ತ ಸಾಗುತ್ತಿದ್ದರೆ, ಅದು ಅಮೆರಿಕನ್ (ಗುಣಮಟ್ಟ) ಆಗಿರಲಿ; ವಿಶ್ವ ಟೆಲಿವಿಶನ್, ರೇಡಿಯೋ, ಸಂಗೀತದಿಂದ ಬೆಸೆದಿದ್ದರೆ, ಆ ಕಾರ್ಯಕ್ರಮಗಳು ಅಮೆರಿಕಾದ್ದಾಗಿರಲಿ; ಮತ್ತು ಒಂದೇ ರೀತಿಯ ಮೌಲ್ಯಗಳನ್ನು ಬೆಳೆಸುತ್ತಿದ್ದರೆ ಅದು ಅಮೆರಿಕನ್ನರಿಗೆ ಹಿತವೆನಿಸುವ ಮೌಲ್ಯಗಳಾಗಿರಲಿ. ಹೀಗಾಗುವಂತೆ ನೋಡಿಕೊಳ್ಳುವುದು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಆರ್ಥಿಕ ಮತ್ತು ರಾಜಕೀಯ ಹಿತದೃಷ್ಟಿಯಿಂದ ಒಳ್ಳೆಯದು" - ಹೀಗೆಂದು ಕ್ಲಿಂಟನ್ ಆಡಳಿತದಲ್ಲಿ ಕೆಲಸ ಮಾಡಿದ ಡೇವಿಡ್ ರೊಥ್‌ಕೊಫ್ ಅಮೆರಿಕೆಯ ಯಜಮಾನಿಕೆಯ ಸ್ವರೂಪದ ಸಾರಾಂಶವನ್ನು ಹೇಳಿದ್ದರಂತೆ.

ಇಂತಹ ಸನ್ನಿವೇಶದಲ್ಲಿ ಯುನೆಸ್ಕೋದಲ್ಲಿ ಸುಮಾರಾಗಿ ಎಲ್ಲಾ ಅಭಿವೃದ್ಧಿಶೀಲ ದೇಶಗಳು ತಮ್ಮ ಪ್ರತಿಯೊಂದು ದೇಶದ ಸಾಂಸ್ಕೃತಿಕ ವಿಶಿಷ್ಟತೆ ಹಾಗೂ ವೈವಿಧ್ಯತೆಯನ್ನು ರಕ್ಷಿಸಬೇಕೆನ್ನುವುದನ್ನು ಅನುಮೋದಿಸಿರುವುದು ಮೆಚ್ಚ ತಕ್ಕ ವಿಷಯವಷ್ಟೇ ಅಲ್ಲ, ಅತ್ಯಂತ ಸ್ವಾಗತಾರ್ಹ ಎಂದು ಸೀತಾರಾಂ ಯೆಚೂರಿ ಹೇಳಿದ್ದಾರೆ.

ವೋಲ್ಕರ್ ಸಮಿತಿಯ ಪರದೆ ಹರಿಯಬೇಕು.....

ಪುಟ 11 ರಿಂದ

ಕೆಳಗಿಳಿದಿರುವುದು ನಿಷ್ಪಕ್ಷಪಾತ ತನಿಖೆಗೆ ಅವಕಾಶ ಮಾಡಿಕೊಡುತ್ತದೆ. ಆದರೆ ಅವರು 2002 ರಲ್ಲಿ ಇರಾಕಿಗೆ ಹೋದ ಕಾಂಗ್ರೆಸ್ ನಿಯೋಗದ ನೇತೃತ್ವ ವಹಿಸಿದ್ದಕ್ಕಾಗಿ, ಇರಾಕಿನ ಮೇಲೆ ನಿರ್ಬಂಧ, ಅತಿಕ್ರಮಣವನ್ನು ವಿರೋಧಿಸಿದ್ದಕ್ಕಾಗಿ ಅವರ ಮೇಲೆ ಗುರಿಯಿಡಲಾಗಿದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ನಟ್ವರ್ ಸಿಂಗ್ ಮತ್ತು ಕಾಂಗ್ರೆಸ್ ಪಕ್ಷ ಈ ತೈಲ ವ್ಯವಹಾರದ 'ಫಲಾನುಭವಿ'ಗಳು ಎಂಬ ಆಪಾದನೆಗೆ ಸವಾಲು ಹಾಕಲು ಈ ನಿಷ್ಪಕ್ಷಪಾತ ತನಿಖೆ ನೆರವಾಗಬಲ್ಲದು.

ಇತ್ತೀಚಿನ ಅವಧಿಯಲ್ಲಿ ಯುಪಿಎ ಸರ್ಕಾರ ತಾನು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸುತ್ತೇನೆ ಎಂದು ನೀಡಿದ ವಚನವನ್ನು ಉಲ್ಲಂಘಿಸುವ ಹಲವು ಕ್ರಮಗಳನ್ನು ಕೈಗೊಂಡಿದೆ. ಭಾರತ-ಅಮೆರಿಕ ರಕ್ಷಣಾ ಚೌಕಟ್ಟು ಒಪ್ಪಂದ, ಜುಲೈ 18 ರ ಜಂಟಿ ಹೇಳಿಕೆ, ಅಂತರ್ರಾಷ್ಟ್ರೀಯ ಅಣುಶಕ್ತಿ ಸಂಸ್ಥೆಯಲ್ಲಿ ಇರಾನ್ ವಿರುದ್ಧ ಮತದಾನ ಇಂತಹ ಕೆಲವು ಉದಾಹರಣೆಗಳು. ಈ ಸರ್ಕಾರ ಹೇಗೆ ವಿದೇಶಾಂಗ ವ್ಯವಹಾರವನ್ನು ನಡೆಸುತ್ತದೆ ಎಂಬ ಬಗ್ಗೆ ಸಿಪಿಐ(ಎಂ)ಗೆ ಆತಂಕವಿದೆ. ನಟ್ವರ್ ಸಿಂಗ್ ನಿರ್ಗಮಿಸಿದರೆ ಅದು ವಿದೇಶಾಂಗ ಧೋರಣೆಯಲ್ಲಿ ಅಮೆರಿಕಾ-ಪರ ದಿಕ್ಕನ್ನು ಕ್ರೋಢೀಕರಿಸಲು ನೆರವಾಗುತ್ತದೆ ಎಂದು ನಿರೀಕ್ಷಿಸುವ ಒಂದು ಬಲವಾದ ಅಮೆರಿಕಾ ಪರ ಲಾಬ್ಬಿ ಭಾರತದಲ್ಲಿದೆ. ಸರ್ಕಾರ ಒಂದು ಸ್ವತಂತ್ರ ವಿದೇಶಾಂಗ ನೀತಿಗೆ ಬದ್ಧವಾಗಿರುವಂತೆ ನೋಡಿಕೊಳ್ಳಲು ಸಿಪಿಐ(ಎಂ) ಮತ್ತು ಎಡಪಕ್ಷಗಳು ದೃಢ ನಿರ್ಧಾರ ಮಾಡಿವೆ. ಮುಂಬರುವ ದಿನಗಳಲ್ಲಿ ಸಿಪಿಐ(ಎಂ) ಈ ಪ್ರಶ್ನೆಗೆ ಅತ್ಯುನ್ನತ ಆದ್ಯತೆ ನೀಡುತ್ತದೆ.

○

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH